# ಪೂರ್ವ ಜನ್ಮಗಳು

ನಾನು ಅದ್ಯಾತ್ಮಿಕತೆಯೊಳಗೆ ಬರುವ ಮುಂಚೆ "ನಮ್ಮ ಜೀವನದಲ್ಲಿ ನಮಗೆ ಬರುತ್ತಿರುವ ಸಮಸ್ಯೆಗಳಿಗೆ ಕಾರಣವೇನೆಂದು" ಯಾರನ್ನು ಕೇಳಿದರೂ, ಎಲ್ಲರೂ ಪೂರ್ವ ಜನ್ಮದಲ್ಲಿ ಮಾಡಿದ ಪಾಪ, ಕರ್ಮ, ಹಣೆಬರಹ ನಾವೇನು ಮಾಡಲು ಆಗುವುದಿಲ್ಲ, ನಮ್ಮ ಜೀವನ ನಮ್ಮ ಕೈಯಲ್ಲಿ ಇಲ್ಲ ಎಂದು ಹೇಳುತ್ತಲೇ ಬಂದಿದ್ದಾರೆ.

ನಾನು ಧ್ಯಾನವನ್ನು ಮಾಡಲು ಪ್ರಾರಂಭಿಸಿದ ನಂತರ ಇತರರ ಮೂಲಕ ನನಗೆ ತಿಳಿದ ವಿಷಯವೇನೆಂದರೆ, ಗತದ ಅರಿವಾದರೆ ಅದು ಮಾಯವಾಗುತ್ತದೆ ಎಂದು. ಅಂದರೆ ಪೂರ್ವಜನ್ಮವನ್ನು ನೋಡಿಕೊಂಡರೆ ಪ್ರಸ್ತುತ ಜನ್ಮದಲ್ಲಿರುವ ಸಮಸ್ಯೆ ತೊಲಗಿ ಹೋಗುತ್ತದೆ ಎಂದು. ಹೀಗೆ ಮಾಡುವುದರಿಂದ ಕೆಲವರಿಗೆ ತಾತ್ಕಾಲಿಕವಾಗಿ ಪರಿಹಾರ ಸಿಕ್ಕರೂ ಮತ್ತೇ ಅವರ ಜೀವನದಲ್ಲಿ ಸಮಸ್ಯೆಗಳು ಮರಳಿ ಬರುತ್ತಿರುವುದನ್ನು ಗಮನಿಸಿದ್ದೇನೆ. ಹಾಗೆಯೇ ಪೂರ್ವಜನ್ಮಗಳನ್ನು ನೋಡಿಕೊಂಡ ನಂತರ ತುಂಬಾ ಜನರು ಮತ್ತಷ್ಟು ನೋವಿನಿಂದ ನರಳುವುದನ್ನೂ ಸಹ ಗಮನಿಸಿದ್ದೇನೆ. ಏಕೆಂದರೆ ಅವರು ತಮ್ಮ ಪೂರ್ವ ಜನ್ಮಗಳಲ್ಲಿ ನೋಡಿಕೊಂಡಿರುವುದು- ವೇಶ್ಯೆ, ಕಳ್ಳ, ಹಂತಕ, ಮೋಸಗಾರ ಇನ್ನೂ ಮೊದಲಾದ ಪಾತ್ರಗಳು ಧರಿಸಿರುವುದನ್ನು. ಇದರಿಂದಾಗಿ ತಪ್ಪು ಮಾಡಿದ್ದೇವೆನ್ನುವ ಭಾವನೆ ಅವರಲ್ಲಿ ಇನ್ನೂ ಬಲಗೊಂಡು, ಜ್ಞಾಪಕ ಬಂದಾಗಲೆಲ್ಲಾ ನೋವುಂಟಾಗುತ್ತಲೇ ಇರುತ್ತದೆ.

ಅದೇ ರೀತಿ ಇತರರಿಂದ ನನಗೆ ತಿಳಿದ ಮತ್ತೊಂದು ವಿಷಯವೇನೆಂದರೆ, ಪೂರ್ವ ಜನ್ಮದಲ್ಲಿ ನಾವು ಯಾರಿಗೆ ಕಿರುಕುಳವನ್ನು ನೀಡಿ ತೊಂದರೆಯನ್ನುಂಟು ಮಾಡಿದ್ದೇವೆಯೋ ಅವರನ್ನು ಗುರುತಿಸಿ ಕ್ಷಮಾಪಣೆಯನ್ನು ಕೇಳಿ ಅವರ ಹತ್ತಿರ ಬಂಧಿಯಾಗಿರುವ ನಮ್ಮ ಪೂರ್ವಜನ್ಮದ ಪಾತ್ರವನ್ನು ಬರಮಾಡಿಕೊಂಡರೆ ಪ್ರಸ್ತುತ ಜನ್ಮದಲ್ಲಿರುವ ಸಮಸ್ಯೆಗಳು ಕಡಿಮೆಯಾಗುತ್ತವೆಂದು. ಆದರೆ ಹೀಗೆ ಮಾಡುವುದರಿಂದ ಕೆಲವರಿಗೆ ತಾತ್ಕಾಲಿಕ ಉಪಶಮನವನ್ನು ಪಡೆದರೂ, ಪುನಃ ಸಮಸ್ಯೆಗಳು ಮರಳಿ ಅವರ ಜೀವನದಲ್ಲಿ ಬರುವುದನ್ನು ಗಮನಿಸಿದ್ದೇನೆ.

"ಈ ರೀತಿ ಏಕೆ ಸಂಭವಿಸುತ್ತಿದೆ ಮತ್ತು ಇದಕ್ಕೆ ಪರಿಹಾರವೇನು" ಎಂದು ನನ್ನನ್ನು ನಾನು ಪ್ರಶ್ನಿಸಿಕೊಂಡರೆ, ನನಗೆ ಬಂದ ಸಂದೇಶವೇನೆಂದರೆ, "ಕೇವಲ ಸಮಸ್ಯೆಗೆ ಸಂಬಂಧಿಸಿದ ಪೂರ್ವಜನ್ಮಗಳನ್ನು ಮಾತ್ರ ನೋಡಿಕೊಂಡರೆ ಸಾಲದು; ಆಯಾ ಜನ್ಮಗಳಲ್ಲಿ ಆಯಾ ಪಾತ್ರಗಳು ತಾವು ತಪ್ಪು ಮಾಡಿದ್ದೇನೆನ್ನುವ ಭಾವನೆಯಿಂದ ಅಲ್ಲದೇ ದಿವ್ಯವಾದ ಭಾವನೆಯಿಂದ ಕಂಡಾಗ ಮಾತ್ರ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರ ಲಭಿಸುತ್ತದೆ" ಎಂದು.

ಇಲ್ಲಿ ಅರ್ಥಮಾಡಿಕೊಳ್ಳಬೇಕಾದ ಮತ್ತೊಂದು ವಿಷಯವೇನೆಂದರೆ- ಈ ಜನ್ಮದ ಸಮಸ್ಯೆಗೆ ಕಾರಣ ಪೂರ್ವಜನ್ಮದಲ್ಲಿ ಮಾಡಿದ ಪಾಪ. ಹಾಗಾದರೆ ಪೂರ್ವಜನ್ಮದಲ್ಲಿ ಏಕೆ ಪಾಪ ಮಾಡಿದ್ದೇವೆಂದರೆ ಅದಕ್ಕೂ ಹಿಂದಿನ ಜನ್ಮದಲ್ಲಿ ಅದಕ್ಕೆ ಸಂಬಂಧಿಸಿದ ಲಿಂಕ್ ಇರುತ್ತದೆ. ಅಂದರೆ ಉದಾಹರಣೆಗೆ ಈ ಜನ್ಮದಲ್ಲಿ ಮೋಸ ಹೋಗಿದ್ದೀರೆಂದುಕೊಳ್ಳಿ, ಏಕೆ ಹೀಗೆ ನಡೆದಿದೆ ಎಂದರೆ ಪೂರ್ವಜನ್ಮದಲ್ಲಿ ನೀವು ಮೋಸ ಮಾಡಿರುವುದರಿಂದ. ಮತ್ತೆ ಪೂರ್ವಜನ್ಮದಲ್ಲಿ ನೀವು ಏಕೆ ಮೋಸ ಮಾಡಿದ್ದೀರಿ, ಅದಕ್ಕೂ ಹಿಂದಿನ ಜನ್ಮದಲ್ಲಿ ನೀವು ಮೋಸ ಹೋಗಿರುವುದರಿಂದ. ಇಲ್ಲಿ ಇಬ್ಬರದೂ ತಪ್ಪೇ ಆದ್ದರಿಂದ ಒಂದೇ ಪೂರ್ವಜನ್ಮವನ್ನು ನೋಡಿಕೊಂಡು ತಪ್ಪು ಮಾಡಿದ್ದೇನೆನ್ನುವ ನಿರ್ಣಯಕ್ಕೆ ಬರಬೇಡಿರಿ.

ಆದುದರಿಂದ ಸಮಸ್ಯೆಗಳನ್ನು ಶಾಶ್ವತವಾಗಿ ಪರಿಷ್ಕರಿಸಬೇಕೆಂದರೆ, ಈ ದ್ವಂದ್ವಗಳ ಆಟ ಆಡುವುದನ್ನು ನಿಲ್ಲಿಸಬೇಕು. ವಿರುದ್ಧವಾದ ಒಳ್ಳೆಯ-ಕೆಟ್ಟ ಪಾತ್ರಗಳನ್ನು ಈಗಾಗಲೇ ಪೂರ್ವಜನ್ಮದಲ್ಲಿ ಪಡೆದಿದ್ದೀರಿ, ಆದುದರಿಂದ

ಈಗ ಅವುಗಳ ಮಧ್ಯೆ ಶತ್ರುತ್ವವನ್ನು ಮುಂದುವರೆಸುವ ನಿಮ್ಮ ಅಭ್ಯಾಸವನ್ನು ತೊರೆದು, ಅವುಗಳ ಮಧ್ಯೆ ಮಿತ್ರತ್ವವನ್ನು ಸೃಷ್ಟಿಸಬೇಕು. ಅಂದರೆ ಪೂರ್ವಜನ್ಮಗಳಿಗೆ ಸಂಬಂಧಿಸಿದ ಎಲ್ಲಾ ಒಳ್ಳೆಯ-ಕೆಟ್ಟ ಪಾತ್ರಗಳನ್ನು ಹೇಗಿವೆಯೋ ಹಾಗೆಯೇ ಸ್ವೀಕರಿಸಿ, ಪ್ರೀತಿಸಿ ಅವುಗಳನ್ನು ದಿವ್ಯವಾದ ಭಾವನೆಯಿಂದ ಕಾಣಲ್ಪಡಬೇಕು. ಅಂದರೆ ಅವುಗಳ ಮೂಲಕ ತಪ್ಪು-ಒಪ್ಪುಗಳಿಗೆ ಅತೀತವಾಗಿ ಇರುವ ದಿವ್ಯವಾದ ಚೈತನ್ಯದ ಸ್ಥಿತಿಯನ್ನು ನೀವು ತಲುಪಬೇಕು. ಅಂದರೆ ನೀವು ಒಳ್ಳೆಯ-ಕೆಟ್ಟದರ ಎರಡಕ್ಕೂ ಪ್ರತಿನಿಧಿಯಾಗಿ ವ್ಯವಹರಿಸುತ್ತಾ ಪರಿಸ್ಥಿತಿಗೆ ತಕ್ಕಂತೆ ಎರಡನ್ನೂ ಬೆರೆಸಿ ಉಪಯೋಗಿಸಿಕೊಳ್ಳುತ್ತಾ ಜೀವನವನ್ನು ಆನಂದದಿಂದ ಸಾಗಿಸಬೇಕೆಂದು ಅರ್ಥ.

## ಆದರ್ಶ

ಈ ದಿವ್ಯವಾದ ಚೈತನ್ಯ ಸ್ಥಿತಿಯನ್ನು ತಲುಪಬೇಕೆಂದರೆ, ಪ್ರಸ್ತುತ ಜನ್ಮವು ಆದರ್ಶವಾಗಿ ತಯಾರಾಗಬೇಕು. ಅಂದರೆ ಈಗ ನಿಮ್ಮ ಜೀವನದಲ್ಲಿ ಸಂಭವಿಸುತ್ತಿರುವ ಪ್ರತಿಯೊಂದು ಘಟನೆಯನ್ನು ದಿವ್ಯವಾಗಿ ಕಾಣಲ್ಪಟ್ಟ ನಂತರವೇ ಅವುಗಳಿಗೆ ಸಂಬಂಧಿಸಿದ ಪೂರ್ವಜನ್ಮದ ಪಾತ್ರಗಳು ನಿಮ್ಮಲ್ಲಿ ಬಂದು ಸೇರುತ್ತವೆ. ಈ ಜನ್ಮದಲ್ಲಿ ಯಾರಾದರೂ ನಿಮಗೆ ತೊಂದರೆ ಕೊಟ್ಟರೆ ಅಥವಾ ಕಡ್ಡಾಯ ಪರಿಸ್ಥಿತಿಯಲ್ಲಿ ನೀವು ಇತರರಿಗೆ ತೊಂದರೆಯನ್ನು ಉಂಟು ಮಾಡಿದ್ದರೆ, ಅವುಗಳನ್ನೆಲ್ಲಾ ನೀವು ದಿವ್ಯವಾಗಿ ನೋಡುವಂತಾದಾಗಲೇ ಪೂರ್ವಜನ್ಮದ ಪಾತ್ರಗಳು ನಿಮ್ಮಲ್ಲಿ ಬಂದು ಸೇರುತ್ತವೆ. ಏಕೆಂದರೆ ಪೂರ್ವ ಜನ್ಮದಲ್ಲಿ ಏಕೆ ಹೀಗೆ ನಡೆದಿದೆ ಎಂದು ಅರ್ಥಮಾಡಿಕೊಳ್ಳುವ ಸ್ಥಿತಿಗೆ ನೀವು ತಲುಪುತ್ತೀರಿ. ಆದುದರಿಂದ ಈಗ ನೀವು ತಪ್ಪು-ಒಪ್ಪುಗಳಿಗೆ ಅತೀತವಾದ ಸ್ಥಿತಿಯನ್ನು ತಲುಪುವುದಕ್ಕೆ ಅಗತ್ಯವಾದ ಸಾಧನೆಯನ್ನು ಮಾಡಬೇಕು. ಆದುದರಿಂದ, ತಪ್ಪು-ಒಪ್ಪುಗಳಿಗೆ ಸಂಬಂಧಿಸಿದ ಚೈತನ್ಯದ ಸ್ಥಿತಿಯಲ್ಲಿ ನೀವು ಸಿಲುಕಿಕೊಂಡಿರುವುದೇ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ.

ಉದಾಹರಣೆಗೆ ನೀವು ಯಾರಿಗಾದರೂ ಮೋಸ ಮಾಡಿದರೆ ಇಲ್ಲವೇ ನಿಮ್ಮನ್ನು ಯಾರಾದರೂ ಮೋಸ ಮಾಡಿದರೆ, ಮೋಸ ಮಾಡುವುದು ಅಥವಾ ಮೋಸ ಹೋಗುವುದು ಎರಡೂ ದಿವ್ಯವಾದ ಅನುಭವಗಳಾಗಿ ಭಾವಿಸಿ ಅವುಗಳ ಮಧ್ಯೆ ಮಿತ್ರತ್ವವನ್ನು ಸೃಷ್ಟಿಸಿ ಅವುಗಳನ್ನು ನೀವು ದಿವ್ಯವಾಗಿ ಅನುಭವಿಸಿದಾಗ, ಆ ಮೋಸಕ್ಕೆ ಸಂಬಂಧಿಸಿದ ಪೂರ್ವಜನ್ಮ ಪಾತ್ರಗಳು ನಿಮ್ಮಲ್ಲಿ ಬೆರೆತು ಹೋಗುತ್ತವೆ ಅಂದರೆ ಸ್ವಚ್ಛವಾದ ಪಾತ್ರಗಳಾಗಿ ಬದಲಾಗುತ್ತವೆ. ನಿಮ್ಮನ್ನು ಯಾರಾದರೂ ಮೋಸಗೊಳಿಸಿದಾಗ ನೀವು ಆ ಸಮಸ್ಯೆಗೆ ಶರಣಾಗಿ ನಿಮ್ಮಲ್ಲಿಯ ದೈವದ ಹತ್ತಿರ ತಲುಪಿದಾಗ, ಆ ದೈವವು ನಿಮಗೆ ಈ ಸೃಷ್ಟಿಯು ಎಲ್ಲಿ ಸಂಭವಿಸುತ್ತಿದೆಯೋ ಎನ್ನುವುದನ್ನು ಅನುಭವ ಪೂರ್ವಕವಾಗಿ ನಿಮಗೆ ತೋರಿಸಿ ಕಲಿಸಿಕೊಡುತ್ತಾನೆ.

ಅದು ಹೇಗೆಂದರೆ....ದೈವವು ಹೀಗೆ ಹೇಳುತ್ತಾನೆ- "ನೋಡಯ್ಯ, ತಮ್ಮ ಜೀವನವು ತಮ್ಮ ಹಣೆಬರಹದ ಪ್ರಕಾರ ಸಂಭವಿಸುತ್ತಿವೆ ಎಂದು ಎಲ್ಲರೂ ನಂಬುತ್ತಿದ್ದಾರೆ ಅಲ್ವಾ. ಹೌದು ಅದು ಸರಿಯೇ ಅದರಿಂದ ಅವನ ಹಣೆಬರಹದಲ್ಲಿ ಮೋಸ ಮಾಡಬೇಕೆಂದು ಬರೆದಿರಬೇಕು ಮತ್ತು ನಿನ್ನ ಹಣೆಬರಹದಲ್ಲಿ ಮೋಸ ಹೋಗಬೇಕೆಂದು ಬರೆದಿರಬೇಕು, ಆದುದರಿಂದ ಇಲ್ಲಿ ತಪ್ಪು ಅವನೊಬ್ಬನದೇ ಅಲ್ಲ. ನಿನ್ನ ಹಣೆಬರಹದಲ್ಲಿ ಇರುವುದರಿಂದಾಗಿ ಅವನು ನಿನ್ನನ್ನು ಮೋಸ ಮಾಡಿದನು. ಆದುದರಿಂದ ನಿನ್ನ ಜೀವನವನ್ನು ನೀನೇ ಸೃಷ್ಟಿಸಿಕೊಳ್ಳುತ್ತಿರುವೆ., ಆದ್ದರಿಂದ ಅವನನ್ನು ಪಕ್ಕಕ್ಕೆ ಇರಿಸಿ, ನಿನ್ನ ಜೀವನದ ಜವಾಬ್ದಾರಿಯನ್ನು ತೆಗೆದುಕೊಂಡು, ಆ ಸಮಸ್ಯೆಯ ಮೂಲ ಎಲ್ಲಿ ಸಂಭವಿಸಿದೆಯೋ ಎನ್ನುವುದನ್ನು ತಿಳಿದುಕೊಂಡು, ಅದನ್ನು ಹೇಗಿದೆಯೋ ಹಾಗೆಯೇ ಒಪ್ಪಿಕೊಂಡು, ಆ ಹಣೆಬರಹವನ್ನು ಬದಲಾಯಿಸಿ, ಅಂದರೆ ಈ ಸಮಸ್ಯೆಯಿಂದ ಹೊರಬರಬೇಕು ಎನ್ನುವ ಹೊಸ ಆಯ್ಕೆಯನ್ನು

ಮಾಡಿಕೊಂಡು, ಆ ಸಮಸ್ಯೆಗೆ ಸಂಬಂಧಿಸಿದ ಮನೋಭಾವನೆಗಳನ್ನು ಕ್ಲೀಯರ್ ಮಾಡಿಕೊಂಡಾಗ ನಿಮ್ಮ ಸಮಸ್ಯೆಗೆ ಪರಿಹಾರ ಲಭಿಸುತ್ತದೆ" ಎಂದು ದೈವವು ನಿಮಗೆ ಅರ್ಥವಾಗುವ ಹಾಗೆ ಹೇಳುತ್ತಾನೆ. ಈ ಜ್ಞಾನವನ್ನು ಆಚರಿಸಿದರೆ ಪರಿಣಾಮ ಲಭಿಸುತ್ತದೆ. ಈ ಅನುಭವ ಜ್ಞಾನವನ್ನು ಪಡೆದ ನಂತರ ಮೋಸಕ್ಕೆ ಸಂಬಂಧಿಸಿದ ಕರ್ಮಗಳು ದಗ್ಧವಾಗುತ್ತವೆ, ಅಂದರೆ ಅದಕ್ಕೆ ಸಂಬಂಧಿಸಿದ ಒಳ್ಳೆಯ-ಕೆಟ್ಟ ರೂಪಗಳು ದಹಿಸಿ ಸ್ವಚ್ಛವಾದ ಪಾತ್ರಗಳಾಗಿ ಬದಲಾಗುತ್ತವೆ.

ನೀವು ನಿಮ್ಮಲ್ಲಿರುವ ದೈವಕ್ಕೆ ಅಥವಾ ಸಮಸ್ಯೆಗೆ ಶರಣಾದಾಗ ಮಾತ್ರ ನಿಮಗೆ ಈ ವಿದ್ಯೆಯನ್ನು ಕಲಿಸಿಕೊಡುತ್ತಾನೆ, ಹೀಗೆ ನೀವು ಕಲಿತುಕೊಂಡು ಪರಿಣಾಮಗಳನ್ನು ಸಾಧಿಸಿದಾಗ, ಸೃಷ್ಟಿಯೆಲ್ಲಾ ನನ್ನಲ್ಲಿಯೇ ಸಂಭವಿಸುತ್ತಿದೆ ಎನ್ನುವ ಭಾವನೆ ನಿಮ್ಮಲ್ಲಿ ಸ್ಥಿರವಾಗುತ್ತದೆ. ಆಗ ನೀವು ಕಡ್ಡಾಯ ಪರಿಸ್ಥಿತಿಯಲ್ಲಿ ಇತರರೊಂದಿಗೆ ಕಠಿಣವಾಗಿ ವರ್ತಿಸಿದರೂ, ಹಿಂದೊಮ್ಮೆ ನಿಮಗೆ ಉಂಟಾದ ತಪ್ಪು ಮಾಡಿದೆನೆನ್ನುವ ಭಾವನೆ ನಿಮ್ಮೊಳಗೆ ಕಣ್ಮರೆಯಾಗುತ್ತಾ, ನನಗೆ ವರ್ತಮಾನದಲ್ಲಿ ಏನನ್ನಿಸುತ್ತದೆಯೋ ಅದನ್ನು ಮಾಡಿದ್ದೇನೆ, ರಾಗ-ದ್ವೇಷಗಳಿಗೆ ಅತೀತವಾದ ಸ್ಥಿತಿಯನ್ನು ತಲುಪಿದ ನಂತರ, ಏನೇ ಸಂಭವಿಸಿದರೂ ಅದು ಪರ್ಫೆಕ್ಟೇ ಆಗಿರುತ್ತದೆ ಎನ್ನುವ ಭಾವನೆ ನಿಮ್ಮಲ್ಲಿ ಎಚ್ಚೆತ್ತುಕೊಳ್ಳಲು ಪ್ರಾರಂಭವಾಗುತ್ತದೆ. ಈ ಭಾವನೆ ನಿಮ್ಮಲ್ಲಿ ಸ್ಥಿರವಾದ ನಂತರ ನೀವು ಪಾಪ-ಪುಣ್ಯಗಳಿಗೆ, ತಪ್ಪು-ಒಪ್ಪುಗಳಿಗೆ ಅತೀತವಾಗಿ ತಲುಪುತ್ತೀರಿ.

ಆದುದರಿಂದ ನೈಪುಣ್ಯತೆಯನ್ನು ಹೊಂದಿರುವ ಆತ್ಮಗಳ ಹಾಗೆ ವರ್ತಿಸಬೇಕು. ನಿಮ್ಮ ಜೀವನದಲ್ಲಿ ಏನು ಸಂಭವಿಸಿದರೂ ಅದಕ್ಕೆ ಇತರರನ್ನು ದೂಷಿಸದೇ, ನನ್ನ ಜೀವನಕ್ಕೆ ನಾನೇ ಸೃಷ್ಟಿಕರ್ತನು, ನನ್ನ ಹಣೆಬರಹದ ಪ್ರಕಾರ ಸಂಭವಿಸಿದೆ ಎಂದು ಜವಾಬ್ದಾರಿಯನ್ನು ವಹಿಸಿಕೊಂಡು, ಆ ಸಮಸ್ಯೆಯ ಮೂಲಕ ದೈವದ ಹತ್ತಿರ ತಲುಪಿದಾಗ ಮಾತ್ರ ಹಣೆಬರಹವನ್ನೂ ಸಹ ಅಳಿಸಲು ಸಾಧ್ಯವಾಗುತ್ತದೆ. ನಾನೇ ಸೃಷ್ಟಿಕರ್ತನು ಎಂದು ಭಾವಿಸಿದಾಗ, ಅಗತ್ಯವಾದಷ್ಟು ಸಮಯ ಆ ಸೃಷ್ಟಿಯನ್ನು ನೀವು ಮುಂದುವರೆಸಬಹುದು., ಇನ್ನು ಸಾಕು ಎಂದೆನಿಸಿದಾಗ ಆ ಸೃಷ್ಟಿಯನ್ನು ನಾಶ ಮಾಡಬಹುದು. ಅಂದರೆ ನನ್ನ ಜೀವನಕ್ಕೆ ನಾನೇ ಬ್ರಹ್ಮನು, ನಾನೇ ವಿಷ್ಣುವು ಮತ್ತು ನಾನೇ ಮಹೇಶ್ವರನು ಎನ್ನುವುದನ್ನು ಅನುಭವದ ಮೂಲಕ ತಿಳಿದುಕೊಳ್ಳಲ್ಪಡುತ್ತೀರಿ.

ಉತ್ತಮರು ಆತ್ಮ ವಿಮರ್ಶೆಮಾಡಿಕೊಂಡು ತಮ್ಮನ್ನು ತಾವು ತಿದ್ದಿಕೊಳ್ಳುತ್ತಾರೆ. ಅಧಮರು ಮಾತ್ರ ಪರರ ನಿಂದನೆಯನ್ನು ಮಾಡುತ್ತಾ ಅವನತಿಯ ಪಾಲಾಗುತ್ತಾರೆ. ಆದುದರಿಂದ ನೀವು ಸೃಷ್ಟಿಕರ್ತರು ಎನ್ನುವ ಭಾವನೆಯಲ್ಲಿ ಇಲ್ಲದಿದ್ದರೆ ನೀವು ಅಂದುಕೊಂಡದ್ದನ್ನು ಸಾಧಿಸಲಾಗುವುದಿಲ್ಲ. ಆದುದರಿಂದ ನೀವು ಅಂದುಕೊಂಡ ಪರಿಣಾಮ ಸಿಗದಿದ್ದಾಗ, ಅದಕ್ಕೆ ಜವಾಬ್ದಾರಿ ವಹಿಸದೇ ಇತರರನ್ನು ದೂಷಿಸಿದರೆ ನೀವೆಷ್ಟು ಪ್ರಯತ್ನಿಸಿದರೂ ನಿಮ್ಮ ಜೀವನ ನಿಮ್ಮ ಕೈಗೆ ಬರುವುದಿಲ್ಲ. ಅಪಜಯವನ್ನು ಅರ್ಥಮಾಡಿಕೊಂಡು ಅದನ್ನು ಜಯವನ್ನಾಗಿ ಪರಿವರ್ತನೆಗೊಳಿಸಲಾಗುವುದಿಲ್ಲ. ದುಃಖಿತರಾಗಿಯೇ ಜೀವನವನ್ನು ಮುಂದುವರೆಸಬೇಕಾಗಿ ಬರುತ್ತದೆ, ಏಕೆಂದರೆ ಆಗ ನೀವಂದುಕೊಂಡ ಪ್ರಕಾರ ಅಲ್ಲದೇ ಹಣೆಬರಹದ ಪ್ರಕಾರ ನಿಮ್ಮ ಜೀವನ ಸಾಗುತ್ತದೆ. ಆದುದರಿಂದ ಎಲ್ಲವನ್ನು ಪರಿಗಣನೆಗೆ ತೆಗೆದುಕೊಂಡು ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳಿರಿ.

ಹಾಗೆಯೇ ಕೆಲವರು ನಾನು ಪೂರ್ವಜನ್ಮದಲ್ಲಿ ಜ್ಞಾನಿಯಾಗಿದ್ದೆ, ಯೋಗಿಯಾಗಿದ್ದೆ ಎಂದು ತಿಳಿದುಕೊಂಡು ಈ ಜನ್ಮದಲ್ಲಿ ಸಾಧನೆ ಮಾಡುವುದನ್ನು ತ್ಯಜಿಸುತ್ತಿದ್ದಾರೆ. ನೀವು ಪೂರ್ವಜನ್ಮದಲ್ಲಿ ಎಷ್ಟೇ ದೊಡ್ಡ ಮಾಸ್ಟರ್ ಆಗಿದ್ದರೂ ಸಹ ಅದು ಈ ಜನ್ಮಕ್ಕಿಂತ ಕಡಿಮೆಯೇ ಎಂದು ತಿಳಿಯಿರಿ. ಏಕೆಂದರೆ ದೈವವು ಯಾವಾಗಲೂ ತನ್ನಲ್ಲಿ ಅಡಗಿರುವ

ಹೊಸ ಹೊಸ ಸಾಮರ್ಥ್ಯಗಳನ್ನು ಕಂಡುಕೊಳ್ಳುತ್ತಾ ಇರುತ್ತಾನೆ, ಆದುದರಿಂದ ನೀವು ಈ ಜನ್ಮದಲ್ಲಿ ಏನು ಸಾಧಿಸುತ್ತಿರುವಿರೋ ಅದರ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸಿರಿ. ನಾನೆ ದೈವವೆಂದು ಅನುಭವದ ಮೂಲಕ ತಿಳಿದುಕೊಳ್ಳುತ್ತಾ ಯಾವಾಗಲೂ ವಿಕಾಸಗೊಳ್ಳುತ್ತಾ ಜ್ಞಾನವನ್ನು ಹೆಚ್ಚಿಸಿಕೊಳ್ಳಿರಿ.

**ಪೂರ್ವಜನ್ಮಗಳನ್ನು ನೋಡಿಕೊಳ್ಳುವುದು:**

ಪೂರ್ವಜನ್ಮಗಳ ಬಗ್ಗೆ ಆಳವಾಗಿ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಏಕೆಂದರೆ ಇದರಿಂದಾಗಿ ಹೊಸ ಸಮಸ್ಯೆಗಳು ಏರ್ಪಡುವ ಅವಕಾಶಗಳಿರುತ್ತವೆ. ಒಬ್ಬನು ತನ್ನ ಪೂರ್ವಜನ್ಮವನ್ನು ನೋಡಿಕೊಂಡು ತುಂಬ ಗೊಂದಲಕ್ಕೆ ಒಳಗಾದನು. ಅವನು ಪೂರ್ವಜನ್ಮದಲ್ಲಿ ರೋಮ್ ಎನ್ನುವ ದೇಶದಲ್ಲಿ ಹುಟ್ಟಿದ್ದನಂತೆ. ಅವನು ತನ್ನ ಮತ್ತು ತನ್ನ ಪತ್ನಿಯ ಹೆಸರನ್ನೂ ಸಹ ತಿಳಿದುಕೊಂಡನಂತೆ. ಇಲ್ಲಿಯವರೆಗೆ ತಿಳಿದುಕೊಂಡಿರುವುದೇನೋ ಚೆನ್ನಾಗಿತ್ತು. ಈಗ ತನ್ನ ಪತ್ನಿ ಎಲ್ಲಿದ್ದಾಳೆಂದು ತಿಳಿದುಕೊಳ್ಳಬೇಕು ಎಂದೆನಿಸಿತಂತೆ. ಆಗ ಅವನಿಗೆ ತಿಳಿದದ್ದು ಏನೆಂದರೆ ಪೂರ್ವಜನ್ಮದಲ್ಲಿಯ ಪತ್ನಿಯು ಈ ಜನ್ಮದಲ್ಲಿ ತನ್ನ ತಂಗಿಯಾಗಿರುವಳೆಂದು ತಿಳಿದ ಅವನು ಷಾಕ್ ಆಗಿ ನನಗೆ ಹೇಳಿದನು. ಆಗ ನಾನು ಹೇಳಿದೆನು "ಆಯಾ ಜನ್ಮಕ್ಕೆ ಸಂಬಂಧಿಸಿದ್ದು ಆಯಾ ಜನ್ಮಗಳಿಗೆ ಸೀಮಿತಗೊಳಿಸು. ಇನ್ನೊಂದು ಜನ್ಮದಲ್ಲಿಯೂ ಸಹ ಅದೇ ಬಂಧವನ್ನು ಮುಂದುವರೆಸಬೇಕೆಂದು ಬಯಸಬೇಡ, ಆತ್ಮವಿದ್ಯೆಯನ್ನು ಕಲಿತುಕೊಂಡಾಗ ಮಾತ್ರ ನಿನಗೆ ಇವೆಲ್ಲವೂ ಅರ್ಥವಾಗುತ್ತವೆ. ಆದುದರಿಂದ ಪೂರ್ವಜನ್ಮಗಳನ್ನು ಆಳವಾಗಿ ತಿಳಿದುಕೊಳ್ಳದೇ ಅವುಗಳಿಗೆ ಸಂಬಂಧಿಸಿದ ಮನೋಭಾವನೆಗಳನ್ನು ಕ್ಲೀಯರ್ ಮಾಡಿಕೊ" ಎಂದು ಸಲಹೆ ಕೊಟ್ಟೆನು.

ತನ್ನ ಮಾವ ಮರಣಿಸಿದ ನಂತರ ಸೊಸೆಯು ಗರ್ಭವತಿಯಾದರೆ ಮನೆಯಲ್ಲಿ ಎಲ್ಲರೂ ಏನೆಂದುಕೊಳ್ಳುತ್ತಾರೆ? ಮರಣಿಸಿದ ಮಾವ ಪುನಃ ಸೊಸೆಯ ಹೊಟ್ಟೆಯಲ್ಲಿ ಹುಟ್ಟುತ್ತಾನೆಂದು. ಹುಟ್ಟಿದ ನಂತರ ಆ ತಾಯಿ ಆ ಮಗುವನ್ನು ತನ್ನ ಮಾವ ಎಂದು ಭಾವಿಸಿ, ನಗ್ನವಾಗಿರುವ ಆ ಮಗುವನ್ನು ಹೇಗೆ ನೋಡಬೇಕು? ಆ ಮಗುವನ್ನು ಹೇಗೆ ಮುದ್ದಾಡಬೇಕು? ಹಾಗೆಂದು ಆ ಮಗುವಿನಿಂದ ದೂರ ಇರುವುದು ಸಹ ಸರಿಯಲ್ಲ. ಏಕೆಂದರೆ ಆ ಮಗುವಿಗೆ ತಾಯಿಯ ಪ್ರೀತಿ ಬರಿದಾಗಿ ತಾಯಿಯ ವಾತ್ಸಲ್ಯ ದಕ್ಕದೇ ಹೋಗುತ್ತದೆ. ಆದುದರಿಂದ ಯಾವ ಜನ್ಮದ್ದು ಆ ಜನ್ಮಕ್ಕೆ ಸೀಮಿತಗೊಳಿಸಿರಿ. ಹಾಗೆಯೇ ನಾನು ಮೇಲಿನ ಉದಾಹರಣೆಯಲ್ಲಿ ತಿಳಿಸಿದ ಹಾಗೆ ಮಾಡಿದರೆ ನೀವು ಪೂರ್ವಜನ್ಮದಿಂದ ಸುಲಭವಾಗಿ ಹೊರಬರುತ್ತೀರಿ.

ಹಾಗೆಯೇ ಕೆಲವರು ನಾನು ಪೂರ್ವಜನ್ಮದಲ್ಲಿ ಜ್ಞಾನಿಯಾಗಿದ್ದೆ, ಭೋಗಿಯಾಗಿದ್ದೆ ಎಂದು ತಿಳಿದುಕೊಂಡು ಈ ಜನ್ಮದಲ್ಲಿ ಸಾಧನೆ ಮಾಡುವುದನ್ನು ತ್ಯಜಿಸುತ್ತಿದ್ದಾರೆ. ನೀವು ಪೂರ್ವಜನ್ಮದಲ್ಲಿ ಎಷ್ಟೇ ದೊಡ್ಡ ಮಾಸ್ಟರ್ ಆಗಿದ್ದರೂ ಸಹ ಅದು ಈ ಜನ್ಮಕ್ಕಿಂತ ಕಡಿಮೆಯೇ ಎಂದು ತಿಳಿಯಿರಿ. ಏಕೆಂದರೆ ದೈವವು ಯಾವಾಗಲೂ ತನ್ನಲ್ಲಿ ಅಡಗಿರುವ ಹೊಸ ಹೊಸ ಸಾಮರ್ಥ್ಯಗಳನ್ನು ಕಂಡುಕೊಳ್ಳುತ್ತಾ ಇರುತ್ತಾನೆ. ಆದುದರಿಂದ ನೀವು ಈ ಜನ್ಮದಲ್ಲಿ ಏನು ಸಾಧಿಸುತ್ತಿರುವಿರೋ ಅದರ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸಿರಿ. ನಾನೇ ದೇವರೆಂದು ಅನುಭವಪೂರ್ವಕವಾಗಿ ತಿಳಿದುಕೊಳ್ಳುತ್ತಾ ಯಾವಾಗಲೂ ವಿಕಾಸಗೊಳ್ಳುತ್ತಾ ಜ್ಞಾನವನ್ನು ಹೆಚ್ಚಿಸಿಕೊಳ್ಳಿರಿ.

**ಪೂರ್ವಜನ್ಮಗಳು ಎಂದರೆ ಏನು?**

ಜೀವಾತ್ಮರಾದ ನೀವು "ನಾನು ಯಾರು" ಎನ್ನುವ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು, ನಿರಂತರವಾಗಿ ನಿಮ್ಮ ಬಗ್ಗೆ ನೀವು ತಿಳಿದುಕೊಳ್ಳುವ ಪ್ರಕ್ರಿಯೆಯಲ್ಲಿ ತಲ್ಲೀನರಾಗಿರುತ್ತೀರಿ. ಈ ಆಕಾಂಕ್ಷೆಯಿಂದಾಗಿ ನೀವು ಅನೇಕ ಜನ್ಮಗಳನ್ನು ಪಡೆದಿದ್ದೀರಿ. ದ್ವಂದ್ವಗಳ ಲಕ್ಷಣಗಳಿಗೆ ಮತ್ತು ಗುಣಗಳಿಗೆ ಸಂಬಂಧಿಸಿದ ವಿವಿಧ ಪ್ರಕಾರದ

ಪಾತ್ರಗಳನ್ನು ಸೃಷ್ಟಿಸಿ ಅವುಗಳ ಮೂಲಕ ದ್ವಂದ್ವಗಳ ಪರ ಸಂಪೂರ್ಣವಾದ ಮಾಹಿತಿಯನ್ನು ಪಡೆಯುತ್ತಾ ಬಂದಿರುವಿರಿ. ಈ ದ್ವಂದ್ವಗಳ ಅನುಭವಗಳನ್ನೇ ನಾವು ಈಗ ಪೂರ್ವಜನ್ಮಗಳ ಪಾತ್ರಗಳೆಂದು ಕರೆಯುತ್ತಿದ್ದೇವೆ.

ನಾನು ಪೂರ್ವಜನ್ಮದಲ್ಲಿ ಯಾವ ಯಾವ ಪಾತ್ರಗಳನ್ನು ಪೋಷಿಸಿದ್ದೇನೆ ಎಂದು ನನ್ನಲ್ಲಿಯ ದೈವವನ್ನು ಕೇಳಿದಾಗ ನನಗೆ ಬಂದ ಸಂದೇಶವೇನೆಂದರೆ, "ಅನೇಕ ಜನ್ಮಗಳನ್ನು ನೀನು ಪಡೆದಿರುವೆ ಆದ್ದರಿಂದ ಅವುಗಳನ್ನೆಲ್ಲಾ ವಿವರವಾಗಿ ನೋಡುವುದು ಅಸಾಧ್ಯ. ಆದುದರಿಂದ ಈ ಭೂಮಿಯ ಮೇಲೆ ನೀನು ನೋಡುತ್ತಿರುವ ಎಲ್ಲಾ ವಿಧದ ಒಳ್ಳೆಯ-ಕೆಟ್ಟ ಪಾತ್ರಗಳನ್ನು ಪೂರ್ವಜನ್ಮದಲ್ಲಿ ಈಗಾಗಲೇ ಪಡೆದಿರುವೆನೆಂದು ಭಾವಿಸಿ ಎಲ್ಲವನ್ನೂ ಬೆರೆಸಿಕೋ, ಹಾಗೆಯೇ ಪ್ರತಿ ಆಲೋಚನೆಯೂ ಸಹ ಪೂರ್ವದಿಂದ ಅಥವಾ ಪೂರ್ವಜನ್ಮಗಳಿಂದ ಬರುತ್ತಿರುವುದೆಂದು ಭಾವಿಸು" ಎಂದು ಸಂದೇಶ ಬಂದಿತು. ಅಂದಿನಿಂದ ಅದೇ ಭಾವನೆಯಲ್ಲಿದ್ದು ಸಾಧನೆಯನ್ನು ಮುಂದುವರೆಸುತ್ತಿದ್ದೇನೆ.

ಇಲ್ಲಿ ಬೆರೆಸಿಕೊಳ್ಳುವುದು ಎಂದರೆ ನಾವು ಸ್ವಚ್ಛವಾದ ಶಕ್ತಿಯನ್ನು ಉಪಯೋಗಿಸಿಕೊಂಡು ಅನೇಕ ಪಾತ್ರಗಳನ್ನು ಪೋಷಿಸಿ ಅನೇಕ ರೂಪಗಳನ್ನು ಸೃಷ್ಟಿಸಿದ್ದೇವೆ. ಈಗ ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಂಡು, ಇವುಗಳನ್ನು ದಿವ್ಯವಾಗಿ ಅನುಭವಿಸಿ, ಇವುಗಳನ್ನು ದಿವ್ಯಶಕ್ತಿಗಳಾಗಿ ಅಥವಾ ಸ್ವಚ್ಛವಾದ ಶಕ್ತಿಗಳಾಗಿ ಅಥವಾ ಪರಮಾನಂದವಾಗಿ ಅಥವಾ ಆತ್ಮಶಕ್ತಿಯಾಗಿ ಪರಿವರ್ತನೆಗೊಳಿಸಿದ ನಂತರ, ಪುನಃ ಸ್ವಚ್ಛವಾದ ಶಕ್ತಿಯೊಳಗೆ ಮರಳಿ ಬೆರೆಸುವುದು. ಹೇಗೆ ಪರಿವರ್ತನೆಗೊಳಿಸಬೇಕು ಎನ್ನುವ ವಿಷಯವನ್ನು ತಿಳಿದುಕೊಳ್ಳಲು "ಅಂತರ್ ಪ್ರಯಾಣ", "ಮಾರ್ಗದರ್ಶಕನು" ಎನ್ನುವ ಟಾಪಿಕ್ ಗಳನ್ನು ಓದಿರಿ.

## ನಮ್ಮ ಈ ಪ್ರಸ್ತುತ ಜನ್ಮದ ಮಹತ್ವವೇನು?

ಈ ಪ್ರಸ್ತುತ ಜನ್ಮವು, ನಿಮ್ಮ ಪೂರ್ವಜನ್ಮದಂಥಹ ಜನ್ಮವಲ್ಲ. ಏಕೆಂದರೆ ಈ ಜನ್ಮದ ಗುರಿಯು ಪೂರ್ವಜನ್ಮದ ಪಾತ್ರಗಳನ್ನು ಬೆರೆಸುವುದು, ಹಾಗೆಯೇ ಅತ್ಮನನ್ನು ಮತ್ತು ಪರಮಾತ್ಮನನ್ನು ಶರೀರದೊಳಗೆ ಆಮಂತ್ರಿಸಿ ದಿವ್ಯಮಾನವನನ್ನಾಗಿ ಪರಿವರ್ತನೆಗೊಳ್ಳುವುದು. ಹೀಗೆ ಎಲ್ಲವನ್ನೂ ಬೆರೆಸುವುದರ ಮುಖ್ಯ ಉದ್ದೇಶ ಏನೆಂದರೆ- ನಮಗೆ ಇಷ್ಟವಿಲ್ಲದ ಭಾಗಗಳನ್ನೆಲ್ಲಾ ಚೈತನ್ಯ ಮನಸ್ಸಿನೊಳಗೆ ಬರಲು ಅನುಮತಿಯನ್ನು ನೀಡಿ, ಇಷ್ಟವಾದವು-ಇಷ್ಟವಿಲ್ಲದವುಗಳ ಮಧ್ಯೆ ಹೊಂದಾಣಿಕೆಯನ್ನು ಮಿತ್ರತ್ವವನ್ನು ಸೃಷ್ಟಿಸಿ, ಪುನಃ ಏಕಗೊಳಿಸಿ, ನಾನೇ ದೇವರು ಎಂದು ಅನುಭವಪೂರ್ವಕವಾಗಿ ತಿಳಿದುಕೊಳ್ಳುವುದು. ಇದರ ಅರ್ಥ ನಾನು ಯಾರು ಎನ್ನುವ ಪ್ರಶ್ನೆಗೆ ಉತ್ತರವನ್ನು ಪಡೆಯುವುದು. ಇವುಗಳೆಲ್ಲದರ ಸಾರಾಂಶವನ್ನು ಮರಳಿ ಹತ್ತಿರಕ್ಕೆ ಸೇರಿಸಿದಾಗ ಮಾತ್ರ ನಾವು ಸಂಪೂರ್ಣತ್ವವನ್ನು ಪಡೆಯುತ್ತಾ ದಿವ್ಯಮಾನವನಾಗಿ ಪರಿವರ್ತನೆ ಹೊಂದುತ್ತೇವೆ. ಇದರಿಂದ ನಾವು ಎಂದಿನಿಂದಲೋ ಮಾಡುತ್ತಿರುವ ಸುಧೀರ್ಘದ ಪ್ರಯಾಣ ಮುಕ್ತಾಯಗೊಂಡು ನಾವು ಮತ್ತೊಂದು ಹೊಸ ಪ್ರಪಂಚದ ಒಳಗೆ ಪ್ರವೇಶಿಸುತ್ತೇವೆ.

ಆದುದರಿಂದ ಈ ಜನ್ಮವು ತುಂಬಾ ಪ್ರತ್ಯೇಕವಾದ ಜನ್ಮ. ಆದರೆ ಇದು ಎಲ್ಲರಿಗೂ ಅನ್ವಯವಾಗುವುದಿಲ್ಲ. ಯಾರು ಪೂರ್ವಜನ್ಮಗಳಲ್ಲಿ ದ್ವಂದ್ವಗಳ ಎಲ್ಲಾ ಗುಣಗಳ ಅನುಭವಗಳನ್ನು ಪಡೆದು, ಅವುಗಳೆಲ್ಲವನ್ನೂ ಮೀರಿ ಇರುವ ಗುಣಾತೀತ ಸ್ಥಿತಿಯನ್ನು ತಲುಪಲು ಸಿದ್ಧರಾಗಿದ್ದಾರೋ, ಅಂದರೆ ಮುಕ್ತಿಯನ್ನು ಪಡೆಯಲು ಅರ್ಹತೆಯನ್ನು ಸಾಧಿಸಿದ್ದಾರೋ ಅಂಥವರಿಗೆ ಇದು ಅನ್ವಹಿಸುತ್ತದೆ. ಆದುದರಿಂದ ನೀವು ಈ ಸಾಧನೆಯನ್ನು ಮಾಡಲು ಅರ್ಹರೋ, ಅಲ್ಲವೋ ಎನ್ನುವುದು ನಿಮ್ಮ ಅಂತರಂಗದಲ್ಲಿ ಕೇಳಿ ತಿಳಿದುಕೊಳ್ಳಿರಿ. ಅರ್ಹತೆ ಉಳ್ಳವರೇ ಇದನ್ನು ಓದಿ ಆಚರಿಸುತ್ತಾರೆ ಎಂದು ನನಗಿರುವ ತಿಳುವಳಿಕೆಯ ಪ್ರಕಾರ ನಾನು ಹೇಳಬಲ್ಲೆನು.

## ಈ ಎಲ್ಲಾ ಜನ್ಮಗಳನ್ನು ಹೇಗೆ ಸೇರಿಸಬೇಕು?

ಕೇವಲ ನೀವು ಮಾಡಬೇಕಾದುದು ಏನೆಂದರೆ, ನೀವು ಜಾಗೃತಿ ಸ್ಥಿತಿಯಲ್ಲಿದ್ದು, ಪೂರ್ವಜನ್ಮ ಪಾತ್ರಗಳನ್ನು ಒಂದೊಂದಾಗಿ ಮನಸ್ಸಿನಲ್ಲಿ ಬರಬೇಕೆಂದು ಪ್ರೀತಿಯಿಂದ ಆಮಂತ್ರಿಸಿ ನಿಮ್ಮ ಪ್ರೀತಿಯಲ್ಲಿ ನೀವು ಮುಳುಗಿ ಹೋಗಬೇಕು. ಅಂದರೆ ನಿಮ್ಮ ಹತ್ತಿರ ಬಾಹ್ಯದ ಮತ್ತು ಅಂತರಂಗದಲ್ಲಿರುವ ಇಷ್ಟವಾದವು, ಇಷ್ಟವಿಲ್ಲದವುಗಳು, ಎಲ್ಲವನ್ನೂ ಪ್ರೀತಿಸಬೇಕು ಮತ್ತು ಇಷ್ಟಪಡಬೇಕು. ಆಗ ಮಾತ್ರ ಇವು ಬರುತ್ತವೆ. ಹಾಗೆಯೇ ಪ್ರಸ್ತುತ ಜನ್ಮದಲ್ಲಿ ಸಂಭವಿಸಿದ ಎಲ್ಲವನ್ನೂ ದೈವಿಕವಾಗಿ ನೋಡಲ್ಪಟ್ಟಾಗಲೇ ಪೂರ್ವಜನ್ಮಗಳೆಲ್ಲಾ ನಿಮ್ಮಲ್ಲಿ ಬೆರೆತು ಹೋಗುತ್ತವೆ.

ಆದರೆ ಪೂರ್ವಜನ್ಮ ಪಾತ್ರಗಳು ನಮ್ಮ ಮೇಲೆ ಕೋಪದಿಂದ ಇವೆ. ಏಕೆಂದರೆ ನಾವು ಒಂದು ಹೊಸ ಮಾರ್ಗದಲ್ಲಿ ಪ್ರಯಾಣಿಸುತ್ತಿರುವಾಗ, ಆ ಮಾರ್ಗದಲ್ಲಿ ಎದುರಾಗುವ ಪರಿಸ್ಥಿತಿಗಳ ಬಗ್ಗೆ ನಮಗೆ ಎಳ್ಳಷ್ಟು ಮಾಹಿತಿ ಇರುವುದಿಲ್ಲ. ಇದರಿಂದಾಗಿ ನಾವು ಊಹಿಸದಿರುವ ಅನೇಕ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಅಂದರೆ ನಮಗೆ ತಿಳಿಯದ ಮಾರ್ಗದಲ್ಲಿ ನಡೆಯುತ್ತಿರುವಾಗ ನಮ್ಮ ಕಾಲಿಗೆ ಮುಳ್ಳುಗಳು ಚುಚ್ಚಿಕೊಂಡು ಗಾಯಗಳು ಆಗಬಹುದು. ಅದೇ ರೀತಿಯಲ್ಲಿ ಪೂರ್ವಜನ್ಮಗಳಲ್ಲಿ ಅನೇಕ ಅವಮಾನಗಳನ್ನು, ಕಷ್ಟಗಳನ್ನು ಎದುರಿಸಬೇಕಾಗಿ ಬಂದಿತ್ತು. ಇವುಗಳ ಕಾರಣದಿಂದ ಅಂತರಂಗದಲ್ಲಿ ಕೆಲವೊಂದು ತೀವ್ರ ಗಾಯಗಳು ಏರ್ಪಟ್ಟಿವೆ.

ಹೀಗೆ ಒಂದೊಂದು ಜನ್ಮದಲ್ಲಿ ಏರ್ಪಟ್ಟಿರುವ ಪ್ರತಿ ಗಾಯವನ್ನು ಹಿಡಿದಿಟ್ಟುಕೊಳ್ಳುವುದರಿಂದ ಜೀವಾತ್ಮವು ಮುಂದುವರೆಯಲಾಗದೇ ಹೋಗುತ್ತಿದ್ದೇನೆಂದು ಗುರುತಿಸಿದೆ. ಅಂದರೆ ಮತ್ತೊಂದು ಹೊಸ ಜನ್ಮವನ್ನು, ಹೊಸ ಅನುಭವವನ್ನು ಪಡೆಯದೇ ಹೋಗಿದೆ. ಆದುದರಿಂದ ಜೀವಾತ್ಮವು ಇವುಗಳನ್ನು ಸ್ವಲ್ಪ ಸಮಯದವರೆಗೆ ದೂರ ತಳ್ಳಿಬಿಟ್ಟಿದೆ. ಜೀವಾತ್ಮ ತನ್ನ ಪ್ರಯಾಣ ಮುಂದೆ ಸಾಗಿಸುವುದಕ್ಕಾಗಿ ಪೂರ್ವಜನ್ಮದ ಪಾತ್ರಗಳನ್ನು ನಿರ್ಲಕ್ಷಿಸಿದೆ. ಇವೆಲ್ಲವನ್ನೂ ಮರಳಿ ನಮ್ಮಲ್ಲಿ ಬೆರೆಸಿಕೊಳ್ಳಲು ಅಥವಾ ಆ ಜನ್ಮಗಳಲ್ಲಿ ಏರ್ಪಟ್ಟ ಗಾಯಗಳನ್ನು ಗುಣಪಡಿಸಿಕೊಳ್ಳಲು ಇದೇ ಸರಿಯಾದ ಸಮಯ. ಏಕೆಂದರೆ ನಾವು ಈ ಪ್ರಸ್ತುತ ಜನ್ಮವನ್ನು ಇದಕ್ಕಾಗಿಯೇ ಆಯ್ಕೆಮಾಡಿಕೊಂಡು ಬಂದಿರುವುದು, ಹಾಗೆಯೇ ಈಗ ಭೂಮಿಯ ಮೇಲಿನ ಶಕ್ತಿಗಳು ಮತ್ತು ಸಮಯವೂ ಸಹ ಇವುಗಳಿಗೆ ಅನುಕೂಲವಾಗಿ ಇವೆಯಾದ್ದರಿಂದ.

ಮುಖ್ಯವಾಗಿ ಈ ಜನ್ಮಕ್ಕೆ ಆತ್ಮದೊಂದಿಗೆ ಒಂದು ಪ್ರತ್ಯೇಕವಾದ ಸಂಬಂಧ ಇದೆ. ಈ ಬಂಧದ ಕಾರಣ, ಪೂರ್ವಜನ್ಮಗಳನ್ನು ಬೆರೆಸುತ್ತಾ ನಾನೇ ದೈವ ಎಂದು ತಿಳಿದುಕೊಳ್ಳುವ ಸಂಪೂರ್ಣ ಅನುಭವವನ್ನು ಪಡೆಯುವುದು ಸಾಧ್ಯವಾಗುತ್ತದೆ. ಇದೆಲ್ಲಾ ನಾನು ಯಾರು ಎನ್ನುವ ಪ್ರಶ್ನೆಗೆ ಸಂಪೂರ್ಣವಾದ ಉತ್ತರ ಪಡೆಯುವುದರ ಬಗ್ಗೆಯೇ.

ಈ ನಿರ್ಲಕ್ಷಿಸಿದ ಭಾಗಗಳೆಲ್ಲವನ್ನೂ ಮರಳಿ ಬೆರೆಸುವುದಕ್ಕೆ ಇದೇ ಸರಿಯಾದ ಸಮಯ. ಈಗ ಇವು ನಿಮ್ಮ ಪ್ರಸ್ತುತ ವಾಸ್ತವಕ್ಕೆ ಸಮೀಪ ಬರುತ್ತಿವೆ. ಪ್ರಸ್ತುತ ನಿಮಗೆ ಬರುತ್ತಿರುವ ಕನಸುಗಳೆಲ್ಲವೂ ಸಹ ಪೂರ್ವಜನ್ಮದ ಅನುಭವಗಳಿಗೆ ಸಂಬಂಧಿಸಿದ ಜ್ಞಾಪಕಗಳು. ಪೂರ್ವಜನ್ಮಗಳನ್ನು ಬೆರೆಸಿಕೊಳ್ಳವುದಕ್ಕಾಗಿ ನೀವು ಯಾವ ಪ್ರಯತ್ನಗಳನ್ನು ಮಾಡುವ ಅಗತ್ಯ ಇಲ್ಲ. ನೀವು ಕೇವಲ ಧ್ಯಾನವನ್ನು ಮಾಡುತ್ತಾ ಅವುಗಳನ್ನು ಆಮಂತ್ರಿಸಿದರೆ ಸಾಕು. ಏಕೆಂದರೆ ತುಂಬಾ ಕಾಲದ ಹಿಂದಿನಿಂದ ಬೇರ್ಪಟ್ಟ ಶಕ್ತಿಗಳೆಲ್ಲಾ, ನಿಮ್ಮ ಸ್ವಚ್ಛವಾದ ಪ್ರೀತಿಗಾಗಿ, ನಿಮ್ಮ ಅನುಮತಿಗಾಗಿ ಈಗ ನಿಮ್ಮ ಬಳಿ ಬರುತ್ತಿವೆಯಾದ್ದರಿಂದ.

ಈ ಪಾತ್ರಗಳೆಲ್ಲಾ ನಿಮ್ಮ ಮುಖದ ಮೇಲೆ ಕಿರುನಗೆಯನ್ನು ಕಾಣಬೇಕೆಂದು, ಪ್ರತಿಯೊಂದು ಪಾತ್ರವೂ ದಿವ್ಯವಾದುದೆಂದು ತಿಳಿದುಕೊಳ್ಳಬೇಕೆಂದು, ನಿಮ್ಮ ಪರ ಅಥವಾ ನಿಮ್ಮ ಪ್ರತಿಯೊಂದು ಪಾತ್ರಗಳ ಪರ ನಿಮ್ಮ ಹೃದಯದಲ್ಲಿ ಸ್ವಲ್ಪವೂ ದ್ವೇಷ ಇಲ್ಲವೆಂದು ತಿಳಿದುಕೊಳ್ಳಬೇಕೆಂದು, ನೀವು ಅವುಗಳನ್ನು ತಿರಸ್ಕಾರದಿಂದ ಅಲ್ಲದೇ ಸಂಪೂರ್ಣ ಪ್ರೀತಿಯಿಂದ ಅವುಗಳನ್ನು ಬಿಡುಗಡೆಗೊಳಿಸಬೇಕೆಂದು ಬಯಸುತ್ತಿವೆ. ಇಲ್ಲಿ ಒಂದು ಮುಖ್ಯವಾದ ವಿಷಯವೇನೆಂದರೆ, ನೀವು ಅವುಗಳನ್ನು ಸ್ವಲ್ಪವೂ ಬದಲಾಯಿಸಬೇಕೆಂದು ನೋಡದೇ ಹೇಗಿವೆಯೋ ಹಾಗೆಯೇ ಒಪ್ಪಿಕೊಂಡು ಅವುಗಳನ್ನು ಅರ್ಥಮಾಡಿಕೊಂಡು ಪ್ರೀತಿಸಿದಾಗ ಮಾತ್ರ ನೀವು ಅವುಗಳನ್ನು ಬಿಡುಗಡೆಗೊಳಿಸಬಹುದು. ಸಾಧನೆ ಮಾಡುತ್ತಿದ್ದಾಗ ನೀವು ಈ ವಿಷಯವನ್ನು ಸ್ಪಷ್ಟವಾಗಿ ಗುರುತಿಸುತ್ತೀರಿ.

ಆದರೆ ನೀವು ಈ ರೀತಿಯಾಗಿ ನನ್ನನ್ನು ಕೇಳಬಹುದು- "ನನ್ನ ಶರೀರಕ್ಕೆ ಮತ್ತು ಮನಸ್ಸಿಗೆ ಹೀಲಿಂಗ್ ತುಂಬಾ ಅವಶ್ಯಕ, ಅಲ್ವಾ!" ಎಂದು, ಆದರೆ ನಿಜವಾಗಿಯೂ ಹೀಲ್ ಆಗಬೇಕಾದದ್ದು ಕೇವಲ ವಿಕಾಸಗೊಳ್ಳದೇ ಒಂದೇ ರೂಪದಲ್ಲಿ ಸಿಲುಕಿಕೊಂಡಿರುವ ಆ ಪೂರ್ವಜನ್ಮದ ಪಾತ್ರಗಳಲ್ಲಿರುವ ಶಕ್ತಿಯು ಮಾತ್ರ. ನಿಮ್ಮಲ್ಲಿ ಚಲನೆ ಇಲ್ಲದೇ ನಿಂತುಹೋಗಿರುವ ಶಕ್ತಿ ಬಿಡುಗಡೆಗೊಳ್ಳಬೇಕೆಂದು, ಅನುಗ್ರಹಿಸಲ್ಪಡಬೇಕೆಂದು ಮತ್ತು ಸ್ವೇಚ್ಛೆಯನ್ನು ಅಥವಾ ಪರಿಹಾರವನ್ನು ಹೊಂದಬೇಕೆಂದು ಬಯಸುತ್ತಿದೆ, ಆಗ ಅದು ಹೊಸ ಪದ್ಧತಿಯಲ್ಲಿ ಪಯಣಿಸುತ್ತಾ ನಿಮಗೆ ಸಹಾಯ ಮಾಡಬಲ್ಲದು.

ಉದಾಹರಣೆಗೆ ನಿಮಗೆ ಕೋಪದ ಪರ ದ್ವೇಷ ಇದೆ ಎಂದುಕೊಳ್ಳೋಣ, ಯಾವಾಗ ನೀವು ಕೋಪವನ್ನು ಪ್ರೀತಿಸುತ್ತೀರೋ ಅದು ತಾನಿರುವ ಸ್ಥಿತಿಯಿಂದ ವಿಕಾಸಗೊಳ್ಳುತ್ತಾ ನಿಮಗೆ ಕೋಪದ ಉಪಯೋಗವನ್ನು ಅನುಭವಪೂರ್ವಕವಾಗಿ ತಿಳಿಸಿ ನಿಮಗೆ ಅದರ ಪರ ದಿವ್ಯವಾದ ಭಾವನೆ ಉಂಟಾಗುವ ಹಾಗೆ ಮಾಡುತ್ತಾ, ಅದು ದಿವ್ಯವಾದ ಶಕ್ತಿಯಾಗಿ ಪರಿವರ್ತನೆ ಹೊಂದುತ್ತದೆ. ಹೀಗೆ ಕೋಪಕ್ಕೆ ಸಂಬಂಧಿಸಿದ ಪೂರ್ವಜನ್ಮದ ಪಾತ್ರಗಳು ದಿವ್ಯತ್ವದಲ್ಲಿ ಸೇರಿದ ನಂತರ ನಿಮ್ಮ ಶರೀರದಲ್ಲಿ ಎಂದಿನಿಂದಲೋ ಇರುವ ಸಮಸ್ಯೆ ಮಾಯವಾಗಿ ಹೋಗುತ್ತದೆ. ಆಗ ನಿಮಗೆ ಅರ್ಥವಾಗುತ್ತದೆ, ಸಮಸ್ಯೆಗಳಿಗೆ ಪರಿಹಾರ ಪೂರ್ವಜನ್ಮ ಪಾತ್ರಗಳಲ್ಲಿ ನಿಂತುಹೋಗಿರುವ ಶಕ್ತಿಗಳನ್ನು ಬಿಡುಗಡೆಗೊಳಿಸಿ ನೀವು ವಿಕಾಸಗೊಳ್ಳುತ್ತಾ ಅವುಗಳನ್ನು ವಿಕಾಸಗೊಳ್ಳಲು ಸಹಕರಿಸುವುದರಿಂದಲೇ ಎಂದು.

ಈ ಪೂರ್ವಜನ್ಮ ಪಾತ್ರಗಳು ಒಂದು ಅಭಿಪ್ರಾಯಕ್ಕೆ ಬಂದು ಅದಕ್ಕೆ ಫಿಕ್ಸ್ ಆಗಿವೆ. ಇವುಗಳನ್ನು ಬಿಡುಗಡೆಗೊಳಿಸುವುದೆಂದರೆ ಯಾವ ರೂಪದಲ್ಲಿ ಅವು ನಿಂತುಹೋಗಿವೆಯೋ ಆ ರೂಪವನ್ನು ಬಿಡುಗಡೆಗೊಳಿಸುವುದು. ಅಂದರೆ ಪೂರ್ವಜನ್ಮದಲ್ಲಿ ಅನುಭವಿಸಿದ ಕಷ್ಟಗಳನ್ನು, ನೋವುಗಳನ್ನು ಬಿಡುಗಡೆಗೊಳಿಸುವಂಥಹದು. ನಿಜವಾಗಿಯೂ ಇಲ್ಲಿ ನೀವು ಪೂರ್ವಜನ್ಮಗಳ ಅಸ್ತಿತ್ವವನ್ನು ನಿರಾಕರಿಸುತ್ತಿಲ್ಲ, ಕೇವಲ ಅದು ಸಿಲುಕಿಕೊಂಡಿರುವ ಭ್ರಮೆಯನ್ನು ಮಾತ್ರ ಬಿಡುಗಡೆಗೊಳಿಸುತ್ತಿರುವಿರಿ.

ಉದಾಹರಣೆಗೆ ಪೂರ್ವಜನ್ಮದಲ್ಲಿ ಕ್ಯಾನ್ಸರ್ ಮೂಲಕ ಮೃತಪಟ್ಟಿರುವಿರೆಂದುಕೊಳ್ಳಿ. ಆಗ ಆ ಪಾತ್ರ, ಕ್ಯಾನ್ಸರ್ ಬಂದರೆ ನನ್ನನ್ನು ತಪ್ಪದೇ ಕೊಲ್ಲುತ್ತದೆ ಎನ್ನುವ ಭ್ರಮೆಯಲ್ಲಿರುತ್ತದೆ. ಯಾವಾಗ ನೀವು ಈ ಪ್ರಸ್ತುತ ಜನ್ಮದಲ್ಲಿ ಕ್ಯಾನ್ಸರ್ ಸಹಾಯದಿಂದ ದಿವ್ಯತ್ವದ ಸಮೀಪ ಸೇರಬಹುದು ಮತ್ತು ಆರೋಗ್ಯದ ಸ್ಥಿತಿಯನ್ನು ಸೇರಬಹುದು ಎನ್ನುವ ಭಾವನೆಯನ್ನಿಟ್ಟುಕೊಂಡು, ಅದಕ್ಕೆ ಸಂಬಂಧಿಸಿದ ಪಾತ್ರಗಳನ್ನು ನಿಮ್ಮ ಚೈತನ್ಯದಲ್ಲಿ ಆಮಂತ್ರಿಸಿ, ಅವುಗಳನ್ನು ಹೇಗಿವೆಯೋ ಹಾಗೆಯೇ ಒಪ್ಪಿಕೊಂಡು, ದಿವ್ಯತ್ವದ ಕಡೆಗೆ ಪಯಣಿಸು ಎಂದು ಅದಕ್ಕೆ ಸ್ವೇಚ್ಛೆಯನ್ನು ನೀಡುತ್ತಾ, ನೀವು

ಸಹ ದಿವ್ಯತ್ವದ ಕಡೆಗೆ ಪ್ರಯಾಣಿಸುತ್ತೀರೋ, ಆಗ ಅದು ತನ್ನ ಪೂರ್ವಜನ್ಮದಲ್ಲಿದ್ದ ಅಭಿಪ್ರಾಯವನ್ನು ಬದಲಾಯಿಸಿಕೊಂಡು ತಾನು ವಿಕಾಸಗೊಳ್ಳುತ್ತಾ ಕ್ಯಾನ್ಸರ್ ಮೂಲಕ ದಿವ್ಯತ್ವದಲ್ಲಿ ಪ್ರವೇಶಿಸಬಹುದು ಎಂದು ತಿಳಿದುಕೊಳ್ಳುತ್ತಾ ನಿಮಗೂ ಸಹ ಆ ಸಮಸ್ಯೆಯ ಮೂಲಕ ಅನುಭವಪೂರ್ವಕವಾಗಿ ಅರ್ಥವಾಗುವ ಹಾಗೆ ತಿಳಿಸಿ ಕೊಡುತ್ತದೆ. ಇದರಿಂದಾಗಿ ಮರಳಿ ನಿಮಗೆ ಆರೋಗ್ಯ ಲಭಿಸುತ್ತದೆ.

ಇಲ್ಲಿ ಭ್ರಮೆ ಎಂದರೆ ಅದು ಇನ್ನೂ ವಿಕಾಸ ಹೊಂದಬೇಕಾದದ್ದು. ಅಂದರೆ ಅದು ಸುಳ್ಳು ಎಂದರ್ಥ ಅಲ್ಲ, ಅದು ನಿಜವೇ ಆದರೆ ಆ ಒಂದು ರೂಪವೇ ನಿಜವಲ್ಲ. ಅದು ವಿಕಾಸಗೊಂಡರೆ ಅನೇಕ ಹೊಸ ಹೊಸ ನಿಜಗಳಂತೆ ರೂಪ ತಾಳುತ್ತದೆ. ಅಂದರೆ ನೆಗೆಟಿವ್ ನಿಂದ ಪಾಸಿಟಿವ್ ಗೆ, ಪಾಸಿಟಿವ್ ನಿಂದ ನ್ಯೂಟ್ರಲ್ ಗೆ, ಆ ನಂತರ ನ್ಯೂಟ್ರಲ್ ನಿಂದ ಡಿವೈನ್ ಗೆ ವಿಕಾಸಗೊಳ್ಳುತ್ತದೆ ಎಂದರ್ಥ.

ನಿಜವಾಗಿಯೂ ನೀವು ಎಂದಿನಿಂದಲೋ ಹೇರಿಕೊಂಡಿರುವ ಭಾರವನ್ನು, ತಪ್ಪು ಮಾಡಿದ್ದೇನೆನ್ನುವ ಭಾವನೆಯನ್ನು ಅಥವಾ ನಿಮ್ಮ ಬಗ್ಗೆ ಮತ್ತು ಸೃಷ್ಟಿಯ ಬಗ್ಗೆ ನಿಮಗಿರುವ ತಪ್ಪು ಅಭಿಪ್ರಾಯಗಳನ್ನು ಈಗ ಪುನಃ ಒಮ್ಮೆ ಗಮನಿಸಿರಿ. ಇವುಗಳಿಗೆ ಸ್ವೇಚ್ಛೆಯನ್ನು ನೀಡಿ ನಿಮ್ಮಿಂದ ಬಿಡುಗಡೆಗೊಳಿಸಿ. ಆಗ ನೀವು ದ್ವೇಷಿಸುತ್ತಿರುವ ವಿಷಯಗಳಲ್ಲಿ ಅಡಗಿರುವ ಬಹುಮಾನವನ್ನು, ರಹಸ್ಯವನ್ನು ಸ್ಪಷ್ಟವಾಗಿ ನೋಡಬಲ್ಲಿರಿ ನೀವು ಇಲ್ಲಿಯವರೆಗೆ ದ್ವೇಷಿಸುತ್ತಿರುವ ಭಾಗಗಳೊಂದಿಗೆ ಯುದ್ಧ ಮಾಡುವುದನ್ನು ನಿಲ್ಲಿಸಿದಾಗ, ಅವು ನೀವು ಯಾರು ಎನ್ನುವುದನ್ನು ತಿಳಿಸಿಕೊಡುತ್ತವೆ.

ಯಾವಾಗ ನೀವು ಸಂಪೂರ್ಣ ಪ್ರೀತಿ ಮತ್ತು ಸ್ವೇಚ್ಛೆ ಪಡೆದ ಪ್ರದೇಶದಿಂದ, ಅತ್ಯಂತ ಕಷ್ಟಕರದ ಮತ್ತು ಸಾಹಸಮಯ ವಿಷಯಗಳನ್ನು ನೋಡುತ್ತಾ, ಅವುಗಳಲ್ಲಿಯ ನಿಜವನ್ನು ಮತ್ತು ಜ್ಞಾನವನ್ನು ಕಂಡುಕೊಳ್ಳುತ್ತೀರೋ ಆಗ ಪೂರ್ವಜನ್ಮ ಪಾತ್ರಗಳು ವಿಕಾಸಗೊಳ್ಳುತ್ತಾ ನಿಮಗೆ ಆನಂದವನ್ನು ನೀಡುತ್ತವೆ.

## ಪೂರ್ವಜನ್ಮಗಳನ್ನು ಹೇಗೆ ಆಮಂತ್ರಿಸಬೇಕು?

ನಿಜವಾಗಿಯೂ ಪೂರ್ವಜನ್ಮಗಳೊಂದಿಗೆ ವ್ಯವಹರಿಸುವುದು ಎನ್ನುವುದು ಮಕ್ಕಳೊಂದಿಗೆ ವ್ಯವಹರಿಸುವ ಹಾಗೆ. ಏಕೆಂದರೆ ಇವು ಮಕ್ಕಳ ಹಾಗೆ ವರ್ತಿಸುತ್ತವೆ. ನೀವು ಒಬ್ಬ ತಾಯಿಯಾಗಿ ಅಥವಾ ತಂದೆಯಾಗಿ, ಮರಳಿ ನಿಮ್ಮಲ್ಲಿ ಸೇರಿಸಿಕೊಳ್ಳಲು ಬರಬೇಕೆಂದು ಅವುಗಳನ್ನು ಆಮಂತ್ರಿಸಬೇಕು. ನೀವು ನಿಮ್ಮ ಮನೆಯನ್ನು ಇವುಗಳಿಗಾಗಿ ಸಿದ್ಧಪಡಿಸಿಕೊಳ್ಳುತ್ತಾ- ಗಾಯಗೊಂಡ, ಭಯಪಟ್ಟ, ಅವಮಾನಗಳಿಗೆ ಈಡಾದ ಪೂರ್ವಜನ್ಮ ಪಾತ್ರಗಳನ್ನು ಹಿಂತಿರುಗಿ ಬರಲು ಅನುಮತಿಯನ್ನು ನೀಡಬೇಕು. ಒಬ್ಬ ತಾಯಿ ಶಾಲೆಯಿಂದ ಮರಳಿ ಬರುವ ಮಗುವಿಗಾಗಿ ಬೇಕಾದವುಗಳೆಲ್ಲವನ್ನೂ ಹೇಗೆ ಸಿದ್ಧಪಡಿಸುತ್ತಾಳೋ ಅದೇ ವಿಧವಾಗಿ. ಏಕೆಂದರೆ ಆ ಪಾತ್ರಗಳು ಹಿಂತಿರುಗಿ ಬರುವಾಗ ಅವುಗಳಿಗೆ ಸಂಬಂಧಿಸಿದ ಆಲೋಚನೆಗಳನ್ನು, ನಂಬಿಕೆಗಳನ್ನು, ಮನೋಭಾವನೆಗಳನ್ನು ಮತ್ತು ಅನುಭೂತಿಗಳನ್ನೂ ಸಹ ತಮ್ಮೊಂದಿಗೆ ತೆಗೆದುಕೊಂಡು ಬರುತ್ತವೆಯಾದ್ದರಿಂದ.

ನಿಜಕ್ಕೂ, ಹೆಚ್ಚಾಗಿ ಪೂರ್ವಜನ್ಮ ಪಾತ್ರಗಳು ನಿಮ್ಮ ಪ್ರೀತಿಯ ಹಾಗೂ ಸೌಹಾರ್ದತೆಯ ಆಮಂತ್ರಣಕ್ಕಾಗಿ ನಿರೀಕ್ಷಿಸುತ್ತಿವೆ. ನಿಜಕ್ಕೂ ಇವು ತುಂಬಾ ದಣಿದುಹೋಗಿವೆ. ಈಗ ಅವು ವಿಶ್ರಾಂತಿಯನ್ನು ಬಯಸುತ್ತಿವೆ. ನಿರಾಶೆಗಳಿಗೆ, ದುಃಖಗಳಿಗೆ, ಕಷ್ಟಗಳಿಗೆ ಈಡಾದ ಪೂರ್ವಜನ್ಮ ಪಾತ್ರಗಳು ಬಯಸುತ್ತಿರುವುದು, ಕೇವಲ ಸುರಕ್ಷಿತವಾದ, ಅನುಕೂಲಕರವಾದ ಮತ್ತು ಅಂಗೀಕಾರ ಭಾವನೆಯಿಂದ ಕೂಡಿದ ಪ್ರದೇಶಗಳ ಬಗ್ಗೆಯೇ. ಒಂದು

ವೇಳೆ ನೀವು ಭಯವನ್ನು, ದುಃಖವನ್ನು ಅಥವಾ ದಣಿವನ್ನು ಅನುಭೂತಿ ಹೊಂದುತ್ತಿದ್ದರೆ, ಅವೆಲ್ಲವೂ ಸಹ ಈ ಪೂರ್ವಜನ್ಮ ಪಾತ್ರಗಳಿಂದ ಬರುತ್ತಿರುವವೇ ಎಂದರ್ಥ. ಆಗ ನೀವು ಮಾಡಬೇಕಾದದ್ದು ಏನೆಂದರೆ, ನಿಮ್ಮ ಬಗ್ಗೆ ನೀವು ಅಂಗೀಕಾರದ ಭಾವನೆಯಿಂದಲೂ ಮತ್ತು ಪ್ರೀತಿಯಿಂದಲೂ ಇದ್ದು, ಅವುಗಳನ್ನು ಮನೆಗೆ ಹಿಂತಿರುಗಿ ಬರಬೇಕೆಂದು ಆಹ್ವಾನಿಸುತ್ತಾ ಧ್ಯಾನವನ್ನು ಮಾಡುವುದು.

**ಕೆಲವೊಂದು ಪಾತ್ರಗಳು ನಮ್ಮಲ್ಲಿ ಏಕೆ ಬೆರೆಯುತ್ತಿಲ್ಲ?**

ನಿಮ್ಮ ಮೇಲೆ ನಿಮಗೆ ಪ್ರೀತಿ ಇದ್ದರೂ ಸಹ ಕೆಲವು ಪೂರ್ವಜನ್ಮಗಳು ನಿಮ್ಮೊಂದಿಗೆ ಬೆರೆಯುವುದಿಲ್ಲ. ಅವು ನಿಮ್ಮಲ್ಲಿ ಬೆರೆಯದೇ ತುಂಬಾ ತೊಂದರೆಯನ್ನು ಕೊಡುತ್ತಾ, ನಿಮ್ಮಲ್ಲಿ ನರಕವನ್ನು ಸೃಷ್ಟಿಸುತ್ತಿರುತ್ತವೆ. ಕೆಲವು ಪೂರ್ವಜನ್ಮದ ಪಾತ್ರಗಳು ಪೂರ್ವದಲ್ಲಿ ಅವುಗಳನ್ನು ನೀವು ದೂರ ತಳ್ಳಿರುವಿರೆಂದು ನಿಮ್ಮ ಮೇಲೆ ಕೋಪದಿಂದ ಇವೆ. ಏಕೆಂದರೆ ಆ ಜನ್ಮಗಳಲ್ಲಿ ಅವು ಎದುರಿಸಿದ ಕಷ್ಟಗಳು ಮತ್ತು ದುಃಖಗಳಿಂದ ಕಾಪಾಡು ಎಂದು, ರಕ್ಷಿಸು ಎಂದು ನಿಮ್ಮನ್ನು ದೇವರನ್ನು ಪ್ರಾರ್ಥಿಸಿಕೊಂಡಿವೆ. ಆದರೆ ಅವುಗಳ ಅಕಾಂಕ್ಷೆಗಳು, ಕೋರಿಕೆಗಳು ಯಾವುದೂ ನೆರವೇರಲಿಲ್ಲ. ಆದುದರಿಂದ ಈ ಕಹಿ ಅನುಭವಗಳು ಆ ಪೂರ್ವಜನ್ಮದ ಪಾತ್ರಗಳಲ್ಲಿ ಕೋಪವನ್ನು ಸೃಷ್ಟಿಸಿವೆ ಮತ್ತು ಅವುಗಳನ್ನು. ಅವುಗಳ ಪಾಡಿಗೆ ಬದುಕಲೆಂದು ತಳ್ಳಿಹಾಕಿರುವ ಹಾಗೂ ನಿರ್ಲಕ್ಷಿಸಿದ ಅನುಭೂತಿಯನ್ನು ಹೊಂದಿವೆ. ಆ ಜನ್ಮಗಳಲ್ಲಿ ಪೂರ್ವಜನ್ಮ ಪಾತ್ರಗಳು ಎಷ್ಟು ಪ್ರಾರ್ಥಿಸಿದರೂ ಯಾವುದೇ ವಿಧದ ರಕ್ಷಣೆಯಾಗಲೀ, ಸಹಾಯವಾಗಲೀ ನಿಮ್ಮಿಂದ ಅಥವಾ ದೇವರಿಂದ ಲಭಿಸಲಿಲ್ಲ. ಆದುದರಿಂದ ಅವು ಪ್ರತಿಯೊಂದನ್ನೂ ಅನುಮಾನಾಸ್ಪದ ದೃಷ್ಟಿಯಿಂದ ನೋಡಲು ಪ್ರಾರಂಭಿಸಿದವು. ಆದುದರಿಂದ ಅವು ಪ್ರಸ್ತುತ ನಿಮ್ಮನ್ನು ದೇವರನ್ನಾಗಿ ಭಾವಿಸುವುದಕ್ಕೆ ಸಿದ್ಧವಿಲ್ಲ.

ನಿಮ್ಮಿಂದ ಆಮಂತ್ರಣ ಪಡೆದು, ಅವು ನಿಮ್ಮ ಚೈತನ್ಯದಲ್ಲಿ ಹಿಂತಿರುಗಿ ಬಂದರೂ, ಅವು ನಿರಂತರವಾಗಿ ನಿಮ್ಮೊಂದಿಗೆ ಜಗಳವಾಡುತ್ತಾ ಯಾವುದೇ ರೀತಿಯ ಬೆಳವಣಿಗೆ ಇಲ್ಲದೇ ನಿಮ್ಮನ್ನು ಕಾಡಿಸುತ್ತಾ, ನಿಮ್ಮ ಶಕ್ತಿಯನ್ನು ಹರಿಸುತ್ತಾ ನಿಮ್ಮ ಜೀವನವನ್ನು ತುಂಬಾ ಕಷ್ಟಕರವನ್ನಾಗಿ ಮಾಡುತ್ತವೆ. ಆ ಜನ್ಮದಲ್ಲಿ ನೀವು ಸಹಾಯ ಮಾಡದಿರುವ ಸಲುವಾಗಿ ಅವು ಪಟ್ಟ ಕಷ್ಟಗಳಿಗೆ ಪ್ರತೀಕಾರವನ್ನು ಈಗ ತೀರಿಸಿಕೊಳ್ಳುತ್ತಿವೆ. ಅವು ಈ ಪ್ರಕ್ರಿಯೆಯಲ್ಲಿ ಮನೆಗೆ ಹಿಂತಿರುಗಿ ಬಂದರೂ ಸಹ ನಿಮ್ಮ ಜೀವನವನ್ನು ನರಕವನ್ನಾಗಿ ಮಾಡುತ್ತಿವೆ. ಇವು ನಿಮ್ಮಿಂದ ಪ್ರೀತಿಪೂರ್ವಕ ಅಪ್ಪುಗೆಯನ್ನು ಬಯಸುತ್ತಿಲ್ಲ, ಇವು ನಿಮಗೆ ಹಣ, ಬಾಂಧವ್ಯಗಳು, ಅನಾರೋಗ್ಯ ಅಥವಾ ಇತರ ವಿಷಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸೃಷ್ಟಿಸುತ್ತಾ, ನಿಮ್ಮ ಮನೆಯನ್ನು ನರಕವನ್ನಾಗಿ ಮಾಡಬೇಕೆಂದುಕೊಳ್ಳುತ್ತವೆ.

ಆದರೆ ಇವು ಕೇವಲ ನಿಜವಾದ ಅಧಿಕಾರವನ್ನು ಗೌರವಿಸುತ್ತವೆ. ಇವು ದಯೆ, ಅನುಕಂಪ, ಕರುಣೆ ತೋರಿಸುವ ಕಂಠಕ್ಕಿಂತ ಆಜ್ಞಾಪಿಸಿ ಮಾತನಾಡುವ ಮಾತುಗಳಿಗೆ ಉತ್ತರವನ್ನು ಕೊಡುತ್ತವೆ. ಒಬ್ಬ ಮೇನೇಜರ್ ಹೇಗೆ ಮೃದುವಾದ ಮಾತುಗಳಿಗಲ್ಲದೇ, ಸ್ಪಷ್ಟವಾದ ಮತ್ತು ಬಲವಾದ ಕಾರಣಗಳಿಗೆ ಬಗ್ಗುತ್ತಾನೋ ಅದೇ ರೀತಿ ಇವು ಸಹ ಕೇವಲ ಒಂದು ಸ್ಪಷ್ಟವಾದ ಮತ್ತು ಅಧಿಕಾರದಿಂದ ಕೂಡಿದ ಮಾತುಗಳಿಗೆ ಮಾತ್ರ ಬಗ್ಗುತ್ತವೆ. ಈ ಪೂರ್ವಜನ್ಮಗಳೆನ್ನುವವು ನಿಮ್ಮ ಮನಸ್ಸಿನಲ್ಲಿ ಮಾತಿನ ರೂಪದಲ್ಲಿ ಚಲಿಸುವುದಕ್ಕೆ ಪ್ರಾರಂಭಿಸಿದಾಗ ಅಥವಾ ನಿಂತುಹೋದ ಶಕ್ತಿಗಳಿಂದಾಗಿ ನಿಮ್ಮ ಶರೀರವು ನೋವುಗಳಿಗೆ ಈಡಾಗುತ್ತಿರುವಾಗ ನೀವು ಗುರುತಿಸಬೇಕಾದುದು ಏನೆಂದರೆ- ಇವುಗಳೆಲ್ಲವುಗಳಿಂದ ಹೊರಬರುವ ಸರಿಯಾದ ಸಮಯ ಇದೇ ಎಂದು ಗುರುತಿಸುತ್ತಾ ಇನ್ನು ಇದೆಲ್ಲಾ ಸಂಭವಿಸುವುದಕ್ಕೆ ಆಸ್ಪದವಿಲ್ಲ ಎಂದು ನೀವು ಅವುಗಳಿಗೆ ಸ್ಪಷ್ಟವಾಗಿ ಹೇಳಲ್ಪಡಬೇಕು. ಆದರೆ ಈ ಮಾತು

ಎನ್ನುವುದು ನಿಮ್ಮ ಮೂಲದಿಂದ, ನಿಮ್ಮ ದಿವ್ಯತ್ವದ ಶಕ್ತಿಯಿಂದ ಬರಬೇಕು. ಇಲ್ಲದಿದ್ದರೆ ಇವು ನಿಮ್ಮನ್ನು ನೋಡಿ ನಗುತ್ತವೆ ಮತ್ತು ತಿರುಗಿ ನಿಮ್ಮ ವಿರುದ್ಧವಾಗುತ್ತವೆ. ಇಲ್ಲಿ ಪರೋಕ್ಷವಾಗಿ ಅವು ನಿಮ್ಮ ಬೆಳವಣಿಗೆಗೆ ಸಹಾಯ ಮಾಡುತ್ತಿವೆ. ಅಂದರೆ ನೀವು ಬೆಳೆದು ದೈವ ಸ್ಥಿತಿಯನ್ನು ತಲುಪಿದ ನಂತರವೇ ಅವು ನಿಮ್ಮ ಸೂಚನೆಯನ್ನು ಪಾಲಿಸುತ್ತವೆ.

ಆದುದರಿಂದ ನೀವು ಒಂದೊಂದು ಪಾತ್ರವನ್ನು ಒಂದೊಂದು ರೀತಿಯಲ್ಲಿ ವ್ಯವಹರಿಸಬೇಕು, ಎಲ್ಲದಕ್ಕೂ ಒಂದೇ ಔಷಧಿ ಕೆಲಸಕ್ಕೆ ಬಾರದು. ಮೆತ್ತಗೆ ಹೇಳುವುದು, ಸಮರ್ಪಿತರಾಗುವುದು, ಪ್ರೀತಿಯಿಂದ ಹೇಳುವುದು, ಸಂತೋಷದಿಂದ ಮಾತನಾಡುವುದು, ಬೈಯ್ಯುವುದು, ಕಿರಿಚುವುದು, ಅಳಿಸುವುದು, ಆದೇಶಿಸುವುದು, ಪ್ರಚೋದಿಸುವುದು ಇಂಥಹ ಅಸ್ತ್ರಗಳನ್ನು ಉಪಯೋಗಿಸಿದಾಗ ಮಾತ್ರ ಪರಿಣಾಮಗಳು ಬರುತ್ತವೆ. ಆಗ ನಿಮಗೆ ವಿವಿಧ ರೀತಿಯ ಮಾತುಗಳ ಪರ ದಿವ್ಯವಾದ ಭಾವನೆ ಬರುತ್ತದೆ.

ನೀವು ಇಂಥಹ ಪೂರ್ವಜನ್ಮ ಪಾತ್ರಗಳೊಂದಿಗೆ ವ್ಯವಹರಿಸಲು ಪ್ರಯತ್ನಿಸಿ ವಿಫಲಗೊಂಡರೆ ತಕ್ಷಣ ಅವುಗಳೊಂದಿಗೆ ವ್ಯವಹರಿಸುವುದನ್ನು ನಿಲ್ಲಿಸಿ ಮೊದಲು ನೀವು ದೇವರ ಹತ್ತಿರ ತಲುಪಬೇಕೆಂದು ಸಂಕಲ್ಪಿಸಿ, ದೇವರ ಹತ್ತಿರ ತಲುಪಿ, ಇಂಥಹ ಪಾತ್ರಗಳನ್ನು ಹೇಗೆ ವ್ಯವಹರಿಸಬೇಕೆನ್ನುವುದು ಕಲಿಸೆಂದು ಕೇಳಿರಿ. ನೀವು ಮತ್ತು ದೈವವು ಸೇರಿದ ನಂತರ ಪೂರ್ವಜನ್ಮ ಪಾತ್ರಗಳ ಮೂಲಕ ಏರ್ಪಟ್ಟ ಸಮಸ್ಯೆ ಅದೃಶ್ಯವಾಗುತ್ತದೆ. ಆದುದರಿಂದ ಸಮಸ್ಯೆಯನ್ನು ಒಮ್ಮೆ ಅಥವಾ ಎರಡು ಬಾರಿ ನಿಮಗಿರುವ ಜ್ಞಾನದಿಂದ ಪ್ರಯತ್ನಿಸಿರಿ. ಪರಿಣಾಮ ಸಿಗದಿದ್ದರೆ ತಕ್ಷಣ ಆ ಸಮಸ್ಯೆಯನ್ನು ದೇವರಿಗೆ ಅರ್ಪಿಸಿ ನೀವು ಸಹ ದೇವರ ಹತ್ತಿರ ತಲುಪಿರಿ. ಇದರ ಬಗ್ಗೆ ವಿವರವಾಗಿ ತಿಳಿದುಕೊಳ್ಳಲು- "ಕರಗಿಹೋಗಿ", "ಸಮರ್ಪಣೆ" ಎನ್ನುವ ಟಾಪಿಕ್ . ಓದಿರಿ.

ಆದ್ದರಿಂದ ಒಂದೇ ಸಮಸ್ಯೆಯನ್ನು ಹಿಡಿದುಕೊಂಡು ವರ್ಷಾನುಗಟ್ಟಲೆ ನೀವೇ ಒಂಟಿಯಾಗಿ ನಿಮಗಿರುವ ಜ್ಞಾನದಿಂದ ಪರಿಹರಿಸಿಕೊಳ್ಳಬೇಕೆಂದು ಪ್ರಯತ್ನಿಸಬೇಡಿ. ಇದನ್ನೇ ತುಂಬಾ ಜನರು ಮಾಡುತ್ತಿರುವುದು. ನಾನು ಸಹ 2004 ರವರೆಗೆ ಇದನ್ನೇ ಮಾಡಿದೆನು. ಹೀಗೆ ಹೇಳಿದರೆ, ಮಾನವ ಪ್ರಯತ್ನವನ್ನು ತಪ್ಪದೇ ಮಾಡಬೇಕಲ್ವಾ? ಎಂದು ತುಂಬಾ ಜನರು ಹೇಳುತ್ತಿದ್ದಾರೆ. ಇದು ಸರಿಯಾದದ್ದೇ ಆದರೆ ನಾನು ಹೇಳುವುದು ಏನೆಂದರೆ ಪ್ರಯತ್ನಿಸುತ್ತಲೇ ಸಮಯವನ್ನು ವ್ಯರ್ಥ ಮಾಡಬೇಡಿರೆಂದು. ಸಾಯುವವರೆಗೂ ಪ್ರಯತ್ನಿಸಬೇಡವೆಂದು. ಒಮ್ಮೆ ಅಥವಾ ಎರಡು ಬಾರಿ ಪ್ರಯತ್ನಿಸಿರಿ, ಪರಿಣಾಮ ಬರದಿದ್ದರೆ ದೇವರ ಸನ್ನಿಧಿಯನ್ನು ತಲುಪಿರಿ.

ಹೌದು, ಪ್ರೀತಿಸುವುದು ಮತ್ತು ಸ್ವೀಕರಿಸುವುದೆನ್ನುವುದು ಪ್ರತಿಯೊಂದಕ್ಕೂ ಶ್ರೇಷ್ಠವಾದ ಉಪಯುಕ್ತಕರದ ಮಾರ್ಗವಾಗಿರಬಹುದು, ಆದರೆ ಇತರರನ್ನು ಪ್ರೀತಿಸುವುದಕ್ಕಿಂತ ನಿಮ್ಮನ್ನು ನೀವು ಪ್ರೀತಿಸಿಕೊಳ್ಳುವುದು ಮತ್ತು ಒಪ್ಪಿಕೊಳ್ಳುವುದೆನ್ನುವುದು ಎಲ್ಲಕ್ಕಿಂತ ಮುಖ್ಯವಾದುದು. ಅಷ್ಟೇ ಆಗಲಿ ನಿಮಗಿಂತ ಪೂರ್ವಜನ್ಮ ಪಾತ್ರಗಳನ್ನೇ ಹೆಚ್ಚಾಗಿ ಪ್ರೀತಿಸುವುದು ಅಥವಾ ನಿಮ್ಮ ಜೀವನವನ್ನು ಹಿಡಿದು ಪೀಡಿಸುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ಪೂರ್ವಜನ್ಮಗಳಿಗೆ ಅನುಮತಿಯನ್ನು ನೀಡುವುದು ಅಥವಾ ಅವು ಎಷ್ಟೇ ತೊಂದರೆ ಕೊಡುತ್ತಿದ್ದರೂ ಏನನ್ನೂ ಹೇಳದೇ ಒಬ್ಬ ವಿಕ್ಟಿಮ್ ನಂತೆ ಅವು ಕೊಡುತ್ತಿರುವ ನೋವುಗಳನ್ನು ಅನುಭವಿಸುವುದೆನ್ನುವುದು ಪ್ರೀತಿಸುವುದೆಂದರ್ಥವಲ್ಲ.

ಅಂದರೆ ಉದಾಹರಣೆಗೆ ಯಾರಾದರೂ ನಿಮ್ಮ ತಾಳ್ಮೆಯನ್ನು ಪರೀಕ್ಷಿಸುತ್ತಾ ನಿಮಗೆ ನೋವುಂಟು ಮಾಡುತ್ತಿರುವಾಗ, ಅವರೊಂದಿಗೆ ಧೈರ್ಯವಾಗಿ ಹೊರ ಹೋಗೆಂದು ಹೇಳುವುದಂಥಹುದು. ಇನ್ನೂ ಹೇಳುವುದಾದರೆ

ನಿಮ್ಮನ್ನು ನೀವು ಪ್ರೀತಿಸಿಕೊಳ್ಳುತ್ತಾ "ಇನ್ನೂ ಸಾಕು" ಎಂದು ಪೂರ್ವಜನ್ಮಗಳೊಂದಿಗೆ ಹೇಳುತ್ತಾ, "ನಿನಗೆ ಸಂಬಂಧಿಸಿದ ಎಲ್ಲವನ್ನೂ ತೆಗೆದುಕೊಂಡು ಹೋಗೆಂದು" ಅವುಗಳಿಗೆ ಆಜ್ಞಾಪಿಸುವುದೂ ಸಹ ಅಪಾರವಾದ ಪ್ರೀತಿಯಲ್ಲಿಯ ಒಂದು ಮುಖ್ಯವಾದ ಭಾಗವೇ. ಆದುದರಿಂದ ಇನ್ನೂ ಸಾಕು ಎಂದು ಹೇಳುವುದಕ್ಕೆ ಭಯಪಡಬೇಡಿರಿ.

ಇಲ್ಲಿ ಗಮನಿಸಬೇಕಾದ ಮತ್ತೊಂದು ವಿಷಯವೇನೆಂದರೆ, ಇಂಥಹ ಪೂರ್ವಜನ್ಮ ಪಾತ್ರಗಳು ಪಟ್ಟ ದುಃಖವನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ನೀವು ಇಲ್ಲದಿದ್ದಾಗ, ಹಾಗೆಯೇ ನಿಮ್ಮನ್ನೂ ಸಹ ಆ ಪಾತ್ರಗಳು ಅರ್ಥಮಾಡಿಕೊಳ್ಳದಿದ್ದಾಗ ಇನ್ನೂ ಸಾಕು ಎಂದು ಹೇಳಬೇಕಾದ ಪರಿಸ್ಥಿತಿ ಬರುತ್ತದೆ. ಅಂದರೆ ಇಂಥಹ ನೀಚತನದ ಮೋಸ ಪಾತ್ರದಿಂದ ನಾನೇಕೆ ಸಂದೇಶವನ್ನು ತೆಗೆದುಕೊಳ್ಳಬೇಕೆನ್ನುವ ಅಹಂಕಾರದಿಂದ ನೀವಿರುವುದು ಹಾಗೆಯೇ ಮೋಸ ಪಾತ್ರವೂ ಸಹ ಪ್ರತೀಕಾರದಿಂದ ನಿಮ್ಮ ಮೇಲಿನ ಕೋಪವು ಹಾಗೆಯೇ ಉಳಿಸಿಕೊಂಡು ತನ್ನ ಮಹತ್ವದ ಬಗ್ಗೆ ನಿಮಗೆ ಸರಿಯಾಗಿ ವಿವರಿಸದೇ ಹೋಗುವುದು ಈ ಅಭಿಪ್ರಾಯಗಳ ಬೇಧಭಾವಗಳಿಗೆ ಕಾರಣ. ಆದುದರಿಂದ ಇದಕ್ಕೆ ಪರಿಹಾರವು ಇಬ್ಬರೂ ಒಬ್ಬರಿಗೊಬ್ಬರು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವವರೆಗೆ ತಾತ್ಕಾಲಿಕವಾಗಿ ಬೇರ್ಪಟ್ಟು, ಒಂಟಿಯಾಗಿ ಪ್ರಯಾಣವನ್ನು ಮುಂದುವರೆಸಿದಾಗ ಮಾತ್ರ ಸರಿಯಾದ ಸಮಯದಲ್ಲಿ ಪುನಃ ಇಬ್ಬರೂ ಸೇರುತ್ತೀರಿ.

ಉದಾಹರಣೆಗೆ ನಾನು ಆಡಿಟರ್ ಆಗಿ ಪ್ರಾಕ್ಟೀಸ್ ಮಾಡುವ ಮುಂಚೆ ನಾನು ಒಬ್ಬ ಸೀನಿಯರ್ ಆಡಿಟರ್ ಹತ್ತಿರ ಕೆಲಸ ಮಾಡಿದೆನು. ಅವನು ನನಗೆ ಕಮೀಷನ್ ಕೊಡುತ್ತಾನೆಂದು, ನಾನು ಅವನಿಗೆ ಅನೇಕ ಹೊಸ ಕೇಸ್ ಗಳು ಬರುವ ಹಾಗೆ ಮಾಡಿದೆನು. ಆನಂತರ ಅವನು ನನಗೆ ಕೊಡಬೇಕಾಗಿದ್ದ ಕಮೀಷನ್ ಕೊಡದಿರುವ ಕಾರಣದಿಂದ ಕೋಪಗೊಂಡು ಅವನಿಂದ ಹೊರಬಂದೆನು. ಎಲ್ಲವನ್ನೂ ಪ್ರೀತಿಯಿಂದ ಬೆರೆಸಿಕೊಳ್ಳಬೇಕೆಂದು ತಿಳಿದಿದ್ದರೂ ಸಹ, ಅವನು ಹಾಗೆ ನನ್ನೊಂದಿಗೆ ಮಾಡಿರುವುದನ್ನು ನಾನು ಒಪ್ಪಿಕೊಳ್ಳಲಾಗದೆ, ಅವನಿಗೆ ಪೈಪೋಟಿಯಾಗಿ ಅದೇ ಏರಿಯಾದಲ್ಲಿ ನಾನು ನನ್ನ ಸ್ವಂತ ಪ್ರಾಕ್ಟೀಸ್ ಮಾಡಲು ಪ್ರಾರಂಭಿಸಿ ತುಂಬಾ ಗ್ರಾಹಕರನ್ನು (Clients) ಆಕರ್ಷಿಸಿದೆನು.

ಹೀಗೆ ನನ್ನ ಪ್ರಾಕ್ಟೀಸ್ ಚೆನ್ನಾಗಿ ನಡೆಯುತ್ತಿರುವಾಗ, ಒಂದು ದಿನ ನನ್ನೊಳಗಿಂದ ಒಂದು ಪ್ರಶ್ನೆಯು ಕೇಳಿಸಿತು- " ನೀನು ಆಡಿಟರ್ ಪ್ರಾಕ್ಟೀಸ್ ನಲ್ಲಿ ಹೇಗೆ ಜಯವನ್ನು ಗಳಿಸುತ್ತಿರುವೆ?" ಎಂದು. ಆಗ ನಾನು ಹೇಳಿದೆನು, "ನನ್ನಷ್ಟಕ್ಕೆ ನಾನು ಸಾಧನೆಯನ್ನು ಮಾಡಿ ನನ್ನ ದೈವದ ಸಹಾಯದಿಂದ ಹೀಗೆ ಮಾಡುವಂತಾದೆನು" ಎಂದು. ಆಗ ನನ್ನೊಳಗಿಂದ ಬಂದ ಸಂದೇಶವೇನೆಂದರೆ, "ಹೌದು, ಸರಿಯಾದುದೇ, ನೀನು ನಿನ್ನ ಪ್ರತಿಭೆಯಿಂದ ಸಾಧಿಸಿದ್ದೀಯಾ, ಆದರೆ ಇದಕ್ಕೆ ಪರೋಕ್ಷವಾಗಿ ನಿನ್ನ ಸೀನಿಯರ್ ಆಡಿಟರ್ ಸಹ ಸಹಾಯ ಮಾಡಿದ್ದಾನೆ. ಏಕೆಂದರೆ ಅವನು ನಿನಗೆ ಮೋಸ ಮಾಡದೇ ಇದ್ದಿದ್ದರೆ, ನೀನು ಇಂದಿಗೂ ಸಹ ಅವನ ಹತ್ತಿರವೇ ಸಾರ್ ಸಾರ್ ಎಂದು ಅವನ ಹಿಂದೆ ಅಲೆಯುತ್ತಾ ಕೆಲಸ ಮಾಡುತ್ತಿರುತ್ತಿದ್ದೆ. ಆದುದರಿಂದ ಅವನು ಹಾಗೆ ಮಾಡಿದ್ದರಿಂದ ಅವನಿಗೆ ನಿನ್ನ ಅಂತರಂಗದಲ್ಲಿ ಕೃತಘ್ನತೆಯನ್ನು ಸಲ್ಲಿಸಿ ಅಂಥಹ ಪೂರ್ವ ಜನ್ಮ ಪಾತ್ರಗಳನ್ನು ನಿನ್ನೊಳಗೆ ಆಮಂತ್ರಿಸಿ ಬೆರೆಸಿಕೋ" ಎಂದು ಸೂಚನೆಯನ್ನು ಕೊಟ್ಟಿತು.

ಇದನ್ನು ಕೇಳಿದ ನಂತರ ನನಗೂ ಸರಿ ಎಂದೆನಿಸಿ ತುಂಬಾ ಸಂತೋಷವಾಯಿತು. ಏಕೆಂದರೆ ಅವನ ಹತ್ತಿರ ಕೆಲಸ ಮಾಡುತ್ತಿದ್ದ ನನ್ನ ಸ್ನೇಹಿತರು ಇಂದಿಗೂ ಅವನ ಹತ್ತಿರವೇ ಕೆಲಸ ಮಾಡುತ್ತಿದ್ದಾರೆ. ತಕ್ಷಣ ಅವನ ಬಗ್ಗೆ, ಹಾಗೆಯೇ ಅವನ ಪ್ರತಿರೂಪದಂತೆ ನನ್ನೊಳಗಿರುವ ಅವನಂಥಹ ಪೂರ್ವಜನ್ಮ ಪಾತ್ರಗಳ ಬಗ್ಗೆ ನನ್ನಲ್ಲಿ ಪ್ರೀತಿ

ಉಂಟಾಯಿತು. ಅದೇ ರೀತಿ ಪೂರ್ವದಲ್ಲಿ ನಾನು ಇದ್ದ ಸ್ಥಿತಿಯಲ್ಲಿ ಅಜ್ಞಾನದಿಂದ ಆ ಪಾತ್ರವನ್ನು ಛೀ ಹೋಗೆಂದು ದೂರ ತಳ್ಳಿದ್ದು ಸಹ ಪರ್ಫೆಕ್ಟ್ ಎಂದೆನಿಸಿತು. ಆನಂತರ ನನ್ನ ಅಂತರ್ವಾಣಿ ಸೂಚಿಸಿದ ಹಾಗೆ ಮೋಸಕ್ಕೆ ಸಂಬಂಧಿಸಿದ ಪೂರ್ವಜನ್ಮದ ಪಾತ್ರಗಳನ್ನು ಪುನಃ ಆಮಂತ್ರಿಸಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು, ಸೇರಿ ಒಂದಾದೆವು.

ಅದೇ ರೀತಿ "ನಾನು ಇತರರ ಮೇಲೆ ಅತಿಯಾಗಿ ಆಧಾರಪಟ್ಟಾಗಲೆಲ್ಲಾ, ನೀನು ಬಂದು ನಾನು ಯಾರ ಮೇಲೆ ಆಧಾರಪಡುತ್ತಿರುವೆನೋ, ಅವನು ನನಗೆ ಮೋಸಗೊಳಿಸುವ ಹಾಗೆ ಮಾಡು" ಎಂದು ಪೂರ್ವ ಜನ್ಮ ಪಾತ್ರಗಳನ್ನು ಬೇಡಿಕೊಂಡೆನು. ಹಾಗೆಯೇ ತಾನೊಂದು ಬಗೆದರೆ ದೈವವೊಂದು ಬಗೆಯುವುದೂ ಸಹ ಪರ್ಫೆಕ್ಟೇ ಎಂದೆನಿಸಿತು. ಏಕೆಂದರೆ ದೈವವು ಮತ್ತೊಂದು ರೀತಿಯಲ್ಲಿ ಬಗೆಯದಿದ್ದರೆ ನಾನು ಬೆಳೆಯುತ್ತಲೇ ಇರಲಿಲ್ಲ. ಆದುದರಿಂದ "ಮೈ ಡೀಯರ್ ದೇವರೇ! ನಾನು ಹೀಗೆ ಬಾಹ್ಯ ದೃಷ್ಟಿಯಲ್ಲೇ ಇದ್ದು ಮಾಯೆಯಲ್ಲಿ ಸಿಕ್ಕಿಹಾಕಿಕೊಂಡಾಗಲೆಲ್ಲಾ ನೀನು ಅಂತರ್ವಾಣಿಯ ಮೂಲಕ ಸಂದೇಶವನ್ನು ಕೊಟ್ಟು ನನಗೆ ಆದೇಶವನ್ನು ನೀಡು. ಆದರೂ ಸಹ ನಾನು ಕೇಳದೇ ಇದ್ದರೆ ಯಾವುದಾದರೂ ರೂಪದಲ್ಲಿ ಬಂದು ಸಮಸ್ಯೆಯನ್ನು ಸೃಷ್ಟಿಸು" ಎಂದು ಬೇಡಿಕೊಂಡೆನು. ಏಕೆಂದರೆ ಆ ಸಮಸ್ಯೆಗೆ ಪರಿಹಾರ ಬಾಹ್ಯದಲ್ಲಿ ಸಿಗುವುದಿಲ್ಲ. ಆಗ ನಾನು ಅಂತರ್ಮುಖನಾಗಿ ಆ ಸಮಸ್ಯೆಯನ್ನು ಗುರುವೆಂದು ಭಾವಿಸಿ ಅದರಿಂದ ಜ್ಞಾನವನ್ನು ಪಡೆದು ನಾನು ನನ್ನ ದೈವದ ಕಡೆಗೆ ಪ್ರಯಾಣಿಸಿ ದೈವದ ಹತ್ತಿರ ತಲುಪುತ್ತೇನೆ.

ಆದುದರಿಂದ ಪೂರ್ವಜನ್ಮ ಪಾತ್ರಗಳೊಂದಿಗೆ ಇನ್ನೂ ಸಾಕು ನನ್ನಿಂದ ಹೊರಟುಹೋಗಿ ಎಂದು ಹೇಳುವುದರ ಅರ್ಥ, ಅವುಗಳ ಮೇಲೆ ದೃಷ್ಟಿ ಇಡುವುದನ್ನು ನಿಲ್ಲಿಸಿ ನಿಮ್ಮ ನಿಜವಾದ ಗುರಿಯಾದ ನಿಮ್ಮ ದೈವದ ಕಡೆಗೆ ನೀವು ಪ್ರಯಾಣಿಸುವುದು ಎಂದು. ಅವುಗಳಿಗೆ ಸಹಜವಾಗಿ ನಿಮ್ಮ ಮೇಲೆ ಪ್ರೀತಿ ಉಂಟಾದಾಗ ಬಂದು ಬೆರೆಯಿರಿ ಎಂದು ಅವುಗಳಿಗೆ ಹೇಳಿರಿ. ಅವು ಬಂದು ಬೆರೆಯದಿದ್ದರೂ ನಿಮಗಾಗುವ ನಷ್ಟವೇನು ಇಲ್ಲ. ನೀವು ಅವುಗಳಿಗಾಗಿ ಕಾಯದೇ ನಿಮ್ಮ ದೈವದ ಕಡೆಗೆ ನೀವು ಪ್ರಯಾಣಿಸಿ. ಹೀಗೆ ನೀವು ಪ್ರಯಾಣಿಸುತ್ತಾ ದಾರಿಯಲ್ಲಿ ಎದುರಾಗುವ ಪೂರ್ವಜನ್ಮ ಪಾತ್ರಗಳಲ್ಲಿ ಯಾವುದನ್ನು ಪ್ರೀತಿಯಿಂದ ಬೆರೆಸಿಕೊಳ್ಳಬಲ್ಲಿರೋ ಆ ಪಾತ್ರಗಳನ್ನು ಬೆರೆಸಿಕೊಳ್ಳುತ್ತಾ ಮುಂದೆ ಸಾಗುತ್ತಿರಿ. ಹೀಗೆ ನೀವು ಎಲ್ಲವನ್ನು ದಿವ್ಯವಾದ ಭಾವನೆಯಿಂದ ನೋಡುವಂತಾಗಬೇಕು ಎನ್ನುವ ತಪನದಿಂದ ಪ್ರಯಾಣವನ್ನು ಮಾಡಿದರೆ, ಕೋಪದಿಂದ ಇರುವ ಪಾತ್ರಗಳೆಲ್ಲಾ ನೀವು ಮಾಡುತ್ತಿರುವ ಸಾಧನೆಗೆ ಮುಗ್ಧರಾಗಿ ನಿಮ್ಮಲ್ಲಿ ಬಂದು ಬೆರೆತು ಹೋಗುತ್ತವೆ. ಇಲ್ಲಿ ಬೆರೆಯುವುದು ಎನ್ನುವುದು, ಒಬ್ಬರ ಅನುಭವಗಳನ್ನು ಮತ್ತೊಬ್ಬರು ಪ್ರೀತಿಯಿಂದ ಹಂಚಿಕೊಳ್ಳುತ್ತಾ, ಇಬ್ಬರೂ ಒಬ್ಬರಿಗೊಬ್ಬರು ಸಂಪೂರ್ಣವಾಗಿ ಅರ್ಥಮಾಡಿಕೊಂಡಾಗ ಮಾತ್ರ ಸಾಧ್ಯವಾಗುತ್ತದೆ ಎಂದು ಗ್ರಹಿಸಿರಿ.

ಹೀಗೆ ಎಲ್ಲಾ ಜನ್ಮಗಳನ್ನು ಬೆರೆಸುವುದರಲ್ಲಿ ಜಯವನ್ನು ಸಾಧಿಸಿದರೆ ನಿಮಗೆ ಉಂಟಾಗುವ ಲಾಭವೇನೆಂದರೆ: ನಿಮ್ಮೊಂದಿಗೆ ನೀವು ಪ್ರಶಾಂತರಾಗಿರುತ್ತೀರಿ, ನಿಮ್ಮ ಮನಸ್ಸು ಸಹ ಪ್ರಶಾಂತವಾಗಿರುತ್ತದೆ, ಎಲ್ಲೆಡೆಯೂ ನಾನೇ ಇದ್ದೇನೆ- ನನ್ನಲ್ಲೇ ಎಲ್ಲವೂ ಇದೆ ಎನ್ನುವ ಭಾವನೆ ನಿಮ್ಮಲ್ಲಿ ಸ್ಥಿರವಾಗುತ್ತದೆ, ಹಾಗೂ ಎಲ್ಲದರಲ್ಲೂ ದೈವವನ್ನೇ ನೋಡುತ್ತೀರಿ. ದ್ವಂದ್ವಗಳಿಗೆ ಸಂಬಂಧಿಸಿದ ಜನ್ಮ ಪರಂಪರೆಯನ್ನು ಮುಗಿಸಿಕೊಂಡು ನ್ಯೂ ಎನರ್ಜಿ ಪ್ರಪಂಚದಲ್ಲಿ ಪ್ರವೇಶಿಸುತ್ತೀರಿ. ಹಾಗೆಯೇ ಇವೆಲ್ಲವೂ ಹಿಂತಿರುಗಿ ಬಂದು ಬೆರೆತಾಗ ನೀವು ವರ್ಣಿಸಲಾಗದಂಥಹ ಪರಮಾನಂದವನ್ನು ಸಹ ಅನುಭವಿಸುತ್ತೀರಿ.

ಆದುದರಿಂದ ಅಂತಿಮವಾಗಿ ನನಗಿರುವ ಅನುಭವದ ಪ್ರಕಾರ ನಾನು ಹೇಳಬಯಸುವುದು ಏನೆಂದರೆ, ಪೂರ್ವಜನ್ಮ ಪಾತ್ರಗಳನ್ನು ಬೆರೆಸಿ, ಕರ್ಮಸಿದ್ಧಾಂತಕ್ಕೆ ಅತೀತವಾದ ಸ್ಥಿತಿಯನ್ನು ತಲುಪಿ, ನಿಮ್ಮ ಆತ್ಮವನ್ನು ಮತ್ತು ನಿಮ್ಮ ಪರಮಾತ್ಮನನ್ನು ನಿಮ್ಮ ಜೀವನದಲ್ಲಿ ಆಮಂತ್ರಿಸಿ, ನಿಮ್ಮ ಎಲ್ಲಾ ಭಾಗಗಳ ಸಂಯೋಜನೆಯಲ್ಲಿ ನೀವು ಸದಾ ಹಾಯಾಗಿ ಇದ್ದು ಮುಕ್ತಿಯನ್ನು ಹೊಂದಬೇಕೆಂದು ಸಲಹೆ ನೀಡುತ್ತಿದ್ದೇನೆ.

## ಕರಗಿಹೋಗಿ

ಶರೀರ, ಮನಸ್ಸು ಮತ್ತು ಹೃದಯವನ್ನು ಮೀರಿ ನಿಮ್ಮಲ್ಲಿರುವ ಆತ್ಮದ ಸಮೀಪ ತಲುಪಬೇಕೆಂದರೆ, ನಿಮ್ಮಲ್ಲುಂಟಾಗುವ ಆಲೋಚನೆಗಳ ಪ್ರಭಾವಕ್ಕೊಳಗಾಗಿ ಒಬ್ಬ ಕೈದಿಯಂತೆ ಜೀವಿಸುತ್ತಿದ್ದೀರೆಂದು ಮೊದಲು ನೀವು ಗುರುತಿಸಬೇಕು. ನಂತರ ಗಮನವನ್ನು ಆಲೋಚನೆಗಳಿಂದ ನಿಮ್ಮ ಕಡೆಗೆ ತಿರುಗಿಸಿ, ನಿಮ್ಮನ್ನು ನೀವು ಕರಗಿಸಿಕೊಳ್ಳುವುದಕ್ಕೆ ಸಾಧನೆಯನ್ನು ಮಾಡಿರಿ. ನೀಮ್ಮಲ್ಲಿ ಏನೇ ಸಂಭವಿಸುತ್ತಿದ್ದರೂ ಅದರಲ್ಲಿ ಎಳ್ಳಷ್ಟೂ ಪಾಲ್ಗೊಳ್ಳದೇ, ಕೇವಲ ನೀವು ಮಾತ್ರ ಮಂಜುಗಡ್ಡೆಯಂತೆ ಕರಗಿಹೋಗಿ ಸ್ವಚ್ಛಗೊಂಡ ನಂತರ ಅಂತರಂಗದೊಳಗೆಲ್ಲಾ ವ್ಯಾಪಿಸಿಕೊಂಡು ಹಾಗೆಯೇ ಇರಿ. ಅಂದರೆ ನಿಮ್ಮೊಳಗೆ ಯಾವ ಸಂಭಾಷಣೆಯಲ್ಲೂ ಪಾಲ್ಗೊಳ್ಳದೇ, ಆಲೋಚನೆಯನ್ನು ಮಾಡದೇ, ಬೇರೆ ಯಾವುದೇ ಕೆಲಸದಲ್ಲಿ ನಿರತರಾಗದೇ, ಕೇವಲ ನಾನು ವ್ಯಾಪಿಸಿದ್ದೇನೆನ್ನುವ ಭಾವನೆಯಲ್ಲೇ ಇರಿ. ಆಗ ನೀವು ಒಂದು ರೀತಿಯ ನಿದ್ರೆಯಂಥಹ ಸ್ಥಿತಿಯಲ್ಲಿ ಮೆಲ್ಲಗೆ ಜಾರುತ್ತೀರಿ, ಇಲ್ಲವೇ ನಿಮ್ಮಲ್ಲಿರುವ ಶೂನ್ಯ ಸ್ಥಿತಿಯಲ್ಲಿ ಇರುತ್ತೀರಿ. ಇಂಥಹ ಸ್ಥಿತಿಯಲ್ಲಿ ನೀವು ಸ್ವಲ್ಪ ಸಮಯ ಇರಲು ಸಾಧ್ಯವಾದರೆ, ಆಲೋಚನೆಗಳು ಅವಷ್ಟಕ್ಕವೇ ಕರಗಿ ಹೋಗಿ ನಿಮ್ಮೊಳಗೆ ನಿಶ್ಯಬ್ದವೇರ್ಪಟ್ಟು, ಆನಂತರ ದೇವರು ಪ್ರತ್ಯಕ್ಷನಾಗುತ್ತಾನೆ. ಆಗ ನೀವು ಅದ್ಭುತವಾದ ಸುಖದ, ಹಗುರತನದ, ತಾಜಾತನದ, ಆನಂದವನ್ನು ಅನುಭವಿಸುತ್ತೀರಿ. ತಕ್ಷಣ ಕಣ್ಣುಗಳನ್ನು ತೆರೆಯದೇ ಈ ಆನಂದವನ್ನು ಎಲ್ಲಾ ಭಾಗಗಳಿಗೆ ಕಳುಹಿಸಿಕೊಡಿ. ಇದರಿಂದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ದೊರಕುತ್ತದೆ. ಹಾಗೆಯೇ ನಿಮ್ಮ ಎಲ್ಲಾ ಭಾಗಗಳ ಮಧ್ಯೆ ಸಮತೋಲನೆ ಏರ್ಪಡುತ್ತದೆ. ಈ ಧ್ಯಾನವನ್ನು ಯಾರಾದರೂ, ಯಾವಾಗಲಾದರೂ, ಎಲ್ಲಿಯಾದರೂ, ಯಾವುದೇ ಸಮಯದಲ್ಲಾದರೂ, ಎಷ್ಟು ಸಮಯ ಬೇಕಾದರೂ ಮಾಡಬಹುದು. ಪ್ರತಿದಿನ ಕನಿಷ್ಟ ಪಕ್ಷ ಹತ್ತು ನಿಮಿಷಗಳಾದರೂ ನಿಮ್ಮನ್ನು ನೀವು ಧ್ಯಾನದಲ್ಲಿ ತೊಡಗಿಸಿಕೊಳ್ಳಿರಿ.

** ಇದನ್ನು ತೆಲುಗು ಭಾಷೆಯಿಂದ ಅನುವಾದಿಸಲ್ಪಟ್ಟಿದೆ. ತೆಲುಗು ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. **http://darmam.com/downloads/telugutopics/17.gathajanmalu.pdf**

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ಕನ್ನಡದಲ್ಲಿ ಕೇಳಬೇಕೆಂದು (To Listen) ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಕೇಳಬಹುದು (Listen) **https://www.youtube.com/playlist?list=PL7sfndcUtXfluvXK-CsihXrxGyyljh8n6**

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ತೆಲುಗು, ಇಂಗ್ಲೀಷ್, ಕನ್ನಡ, ಹಿಂದಿ ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. http://darmam.com/library.html

**ಈ ಕೆಳಗಿನ ಲಿಂಕನ್ನು ಕ್ಲಿಕ್ ಮಾಡಿ ಆಡಿಯೋಗಳನ್ನು ಕೇಳಿದರೆ ಮತ್ತು ಟಾಪಿಕ್ ಗಳನ್ನು ಓದಿದರೆ ನಿಮಗೆ ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಸ್ಪಷ್ಟವಾಗಿ ಅರ್ಥವಾಗುತ್ತದೆ.

**http://darmam.com/important-topics.html**